ವಿಜಯಪುರ | ಸಂಪುಟ 04 | ಸಂಚಿಕೆ 120 | ಪುಟ 04 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur

editor.udayarashmi@gmail.com RNI NO: KARKAN/2023/86203 ಗುರುವಾರ, ಜುಲೈ, 02, 2026

"ಚುನಾವಣಾ ಆಯೋಗದ ನಿಯಮಗಳ ಪ್ರಕಾರ ಸರ್ಕಾರಿ ಅಧಿಕಾರಿಗಳನ್ನು ಮಾತ್ರ :ಐಔಗಳಾಗಿ ನೇಮಕ ಮಾಡಬೇಕು. ಆದರೆ, ಬೆಂಗಳೂ–ರಿನ ಜಯನಗರ ವಿಧಾನಸಭಾ ಕ್ಷೇತ್ರದ ಸುಮಾರು 20 ಕಡೆಗಳಲ್ಲಿ ಸರ್ಕಾರಿ ನೌಕರರಲ್ಲದ ವ್ಯಕ್ತಿಗಳು ಹಾಗೂ ಕಾಂಗ್ರೆಸ್ ಮುಖಂಡರನ್ನು :ಐಔಗಳಾಗಿ ನೇಮಕ ಮಾಡಲಾಗಿದೆ."



■ ಆರ್. ಅಶೋಕ
ವಿಧಾನಸಭೆ ವಿಪಕ್ಷ ನಾಯಕರು

## ತಮ್ಮ ಪರ ಬ್ಯಾಟಿಂಗ್ ಮಾಡಲು ಮಾಜಿ ಸಿಎಂ ಗೆ ಒತ್ತಾಯ | ಸಚಿವ ಸಂಪುಟದಲ್ಲಿ ಇನ್ನೂ 20 ಸ್ಥಾನಗಳು ಖಾಲಿ

# ಸಿದ್ದರಾಮಯ್ಯ ಮನೆಗೆ ಸಚಿವಾಕಾಂಕ್ಷಿಗಳ ದಂಡು

ಬೆಂಗಳೂರು: ಮಂಗಳವಾರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸವು ಪವರ್ ಸೆಂಟರ್ ಆಗಿ ಬದಲಾಗಿತ್ತು. ಸಚಿವಕಾಂಕ್ಷಿಗಳು ಸೇ–ರಿದಂತೆ ಹಲವಾರು ಕಾಂಗ್ರೆಸ್ ನಾಯಕರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ಎನ್ ಚಲುವರಾಯಸ್ವಾಮಿ, ಮಧು ಬಂಗಾರಪ್ಪ, ಸಂತೋಷ್ ಲಾಡ್, ಕೆ ಎಂ ಶಿವಲಿಂಗೇಗೌಡ, ಶ್ರೀನಿವಾಸ್ ಮಾನೆ, ಯಾಸಿರ್ ಅಹ್ಮದ್ ಖಾನ್ ಪಠಾಣ್ ಮತ್ತು ಕೆ ವೆಂಕಟೇಶ್ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಕೂಡ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ಪ್ರದೀಪ್ ತಮ್ಮ ಕ್ಷೇತ್ರದಲ್ಲಿ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ



ಕೆಲವು ಜೆಡಿಎಸ್ ಕಾರ್ಯಕರ್ತರು ಅವರ ಕಡೆಗೆ ಚಪ್ಪಲಿ ಎಸೆದಾಗ ಏನಾಯಿತು ಎಂದು ವಿವರಿಸಿದರು.

ಸಿದ್ದರಾಮಯ್ಯ ಅವರು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕರೆ ಮಾಡಿ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಕೋರಿದರು. ಅವರು ಪ್ರದೀಪ್ ಅವರನ್ನು ನಿರುತ್ಸಾಹಗೊಳಿಸಬೇಡಿ ಎಂದು ಒತ್ತಾಯಿಸಿದರು ಮತ್ತು ರಾಜಕೀಯ ಜೀವನದಲ್ಲಿ ಇಂತಹ ಘಟನೆಗಳು ಸಾಮಾನ್ಯ ಎಂದು ಹೇಳಿದರು.


ಪೊಲೀಸರ ಉಪಸ್ಥಿತಿಯ ಹೊರತಾಗಿಯೂ ಆಡಳಿತ ಪಕ್ಷದ ಶಾಸಕರೊಬ್ಬರು ಇಂತಹ ಘಟನೆಯನ್ನು ಎದುರಿಸಬೇಕಾಯಿತು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಾದಿಸಿದರು. ಉಪಮುಖ್ಯಮಂತ್ರಿ ಜಿ ಪರಮೇಶ್ವರ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಸಚಿವ ಸಂಪುಟ ವಿಸ್ತರಣೆ ಸಮಯದಲ್ಲಿ ತಮಗೂ ಮಂತ್ರಿ ಸ್ಥಾನ ಕೊಡಿಸುವಂತೆ ಆಕಾಂಕ್ಷೆಗಳು ಹಲವಾರು ಶಾಸಕರು ಸಿದ್ದರಾಮಯ್ಯ ಅವರ ಬೆಂಬಲವನ್ನು ಕೋರುತ್ತಿದ್ದಾರೆ ಎಂದು ಹೇಳಲಾಗುತ್ತದೆ.

### 20 ಸ್ಥಾನಗಳು ಖಾಲಿ

ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರ ಸಂಪುಟವು ವಿಸ್ತರಣೆಗಾಗಿ ಕಾಯುತ್ತಿದೆ. ಒಟ್ಟು 34 ಸದಸ್ಯರ ಸಚಿವ ಸಂಪುಟದಲ್ಲಿ ಇನ್ನೂ 20 ಸ್ಥಾನಗಳು ಖಾಲಿ ಇವೆ.

### ಸಿದ್ದರಾಮಯ್ಯ ಮುಂದೆ ಪ್ರದೀಪ್ ಈಶ್ವರ್ ಕಣ್ಣೀರು!

ಚಿಕ್ಕಬಳ್ಳಾಪುರ: ಚಪ್ಪಲಿ ಎಸೆತ ಪ್ರಕರಣ ಬೆನ್ನಲ್ಲೇ ಚಿಕ್ಕಬಳ್ಳಾಪುರ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಇಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಕಣ್ಣೀರು ಹಾಕಿದ ಘಟನೆ ನಡೆದಿದೆ.



ಪ್ರದೀಪ್ ಈಶ್ವರ್ ಇಂದು ನನ್ನನ್ನು ಭೇಟಿಮಾಡಿ, ಕೆಂಪೇಗೌಡ ಜಯಂತಿ ಆಚರಣೆಯ ವೇಳೆ ಬಿಜೆಪಿ ಹಾಗೂ ಜೆಡಿ–ಎಸ್ ಕಾರ್ಯಕರ್ತರು ತಮ್ಮ ಮೇಲೆ ಚಪ್ಪಲಿ ಎಸೆದು, ತಮ್ಮ ಕುಟುಂಬದವರನ್ನು ನಿಂದಿಸಿದ್ದು ಸೇರಿದಂತೆ ಅಂದು ನಡೆದ ಎಲ್ಲಾ ಘಟನೆಯನ್ನು ವಿವರಿಸಿ, ತಮ್ಮ ನೋವನ್ನು ಹಂಚಿಕೊಂಡರು. ರಾಜಕಾರಣದಲ್ಲಿ ಇಂತಹ ಘಟನೆಗಳು ಸಾಮಾನ್ಯವಾಗಿದ್ದು, ಇಲ್ಲೇ ಇದ್ದು ಇಂಥವನ್ನು ಎದುರಿಸಬೇಕು. ಇದರಿಂದ ಧೃತಿಗೆಡಬೇಡಿ, ನಿಮ್ಮೊಂದಿಗೆ ನಾವಿದ್ದೇವೆ ಎಂದು ಸಿದ್ದರಾಮಯ್ಯ ಧೈರ್ಯ ತುಂಬಿದ್ದಾರೆ.

## ಮೂಕಿಹಾಳ ಗ್ರಾಪಂ ವ್ಯಾಪ್ತಿಯಲ್ಲಿ ಬೆಳೆವಿಮೆ ಪರಿಹಾರ ವಿತರಣೆಯಲ್ಲಿ ರೈತರಿಗೆ ವಂಚನೆಯ ಆರೋಪ

# ಅಧಿಕಾರಿಗಳ ನಡೆ ಖಂಡಿಸಿ ರೈತ ಸಂಘದಿಂದ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟಿ: ತಾಲ್ಲೂಕಿನ ಮೂಕಿಹಾಳ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ರೈತರಿಗೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಸನ್ 2019–2026ರವರೆಗೆ

ಬೆಳೆವಿಮೆ ತುಂಬಿದ ರೈತರಿಗೆ ವಿಮೆ ಹಣ ದೊರೆಯದಂತೆ ಅಧಿಕಾರಿಗಳು ವ್ಯವಸ್ಥಿತವಾಗಿ ವಂಚನೆ ಮಾಡಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ ನಡಹಳ್ಳಿ ಆರೋಪಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಮಂಗಳವಾರ ತಾಲ್ಲೂಕು ಮೂಕಿಹಾಳ ಗ್ರಾಪಂ ಸಮೀಪದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಸನ್ 2019–20–2020–21–2021–22 ಮುಂಗಾರು ಹಂಗಾಮು, 2022–23ರ ಹಿಂಗಾರು ಹಂಗಾಮು,2024–25ರಲ್ಲಿ ಹಿಂಗಾರು ಹಂಗಾಮಿನಲ್ಲಿ ರೈತರಿಗೆ ಬೆಳೆವಿಮೆ ಪರಿಹಾರ ಬಂದಿಲ್ಲವೆಂದು ಅಧಿಕಾರಿಗಳೇ ಮಾಹಿತಿ ನೀಡುತ್ತಿದ್ದಾರೆ. ಬೆಳೆವಿಮೆಗೆ ಕಂತು ಪಾವತಿಸಿದ ರೈತರ ಜಮೀನುಗಳಿಗೆ ಹೋಗಬೇಕಾದ ಅಧಿಕಾರಿಗಳು ಎಲ್ಲೋ ಕೂತು ಬೆಳೆ ಸರ್ವೆ ಮಾಡುತ್ತಾರೆ. ಇದರಲ್ಲಿ ದೊಡ್ಡ ವ್ಯವಸ್ಥಿತ ಮೋಸ ಅಡಗಿದೆ. ಗ್ರಾಮ ಪಂಚಾಯಿತಿಯ ನಾಲ್ವರು ಸಿಬ್ಬಂದಿಯೇ ರೈತನೊಬ್ಬನ ಜಮೀನಿಗೆ ಹೋಗಿ ಬೆಳೆ ಸಮೀಕ್ಷೆ ಮಾಡಿದ್ದಾಗಿ ತೋರಿಸುತ್ತಾರೆ. ಒಟ್ಟಾರೆ ಈ ಭಾಗದಲ್ಲಿ ಬೆಳೆವಿಮೆಯನ್ನು ರೈತರಿಗೆ ತಲುಪಿಸದೇ ವಂಚಿಸಲಾಗಿದೆ. ಅಧಿಕಾರಿಗಳಿಂದ ಸಮಗ್ರ ಮಾಹಿತಿ ತ–ರಿಸಿಕೊಂಡು ಕೇಂದ್ರ ಸರ್ಕಾರಕ್ಕೆ ದೂರು ಸಲ್ಲಿಸಲಾಗುವುದು ಎಂದು ಹೇಳಿದರು.

ಮೂಕಿಹಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಹುಹಳ್ಳಿ ಕುಡಿವ ನೀರಿನ ಯೋಜನೆ ಅಡಿ ಶಿವಪೂರ, ನಾಗೂರ, ಹರನಾಳ, ಹಡಗಿನಾಳ ಗ್ರಾಮಗಳಿಗೆ ಇವತ್ತಿಗೂ ಕುಡಿಯುವುದಕ್ಕೆ ನೀರು ಪೂರೈಕೆ ಆಗುತ್ತಿಲ್ಲ ಆರ್‌ಡಬ್ಲುಎಸ್ ಅಧಿಕಾರಿಗಳು ಬಹುಹಳ್ಳಿ ಕುಡಿಯುವ ನೀರಿನ ಯೋಜನೆ ಸಂಪೂರ್ಣ ಹಳ್ಳ ಹಿಡಿಯುವಂತೆ ಮಾಡಿದ್ದಾರೆ. ಈ ಗ್ರಾಪಂ ವ್ಯಾಪ್ತಿಯಲ್ಲಿ 10 ಶುದ್ಧ ಕುಡಿಯುವ ನೀರಿನ ಘಟಕಗಳಿವೆ ಯಾವವು ಚ್ಯಾಲು ಇಲ್ಲಾ ಎಲ್ಲವೂ ಬಂದ್ ಬಿದ್ದು ತುಕ್ಕು ಹಿಡಿದು ಹೋಗಿವೆ ಎಂದು ಶಾಂತಗೌಡ ನಡಹಳ್ಳಿ ಆರೋಪಿಸಿದರು. ಇದನ್ನು ಮೂಕಿಹಾಳ ಗ್ರಾಪಂ ಪಿಡಿಒ ಎಸ್.ಆಯ್.ಗುಂಡಣ್ಣವರ ಒಪ್ಪಿಕೊಂಡರು.

ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡಿ, ಅಧಿಕಾರಿಗಳು ರೈತರ ರಕ್ತ ಕುಡಿಯುವುದಕ್ಕೆ ಹುಟ್ಟಿದ್ದಾರೆಯೇ ಹೊರತು ಉದ್ಧಾರ ಮಾಡುವುದಕ್ಕಲ್ಲ. ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮದೊಂದೇ ಕ್ಷೇತ್ರಕ್ಕೆ ಸೀಮಿತವಾಗಿ ಇದ್ದಾರೆ. ಎಂಟು ಕ್ಷೇತ್ರದ ಶಾಸಕರು ರೈತರ ಸಮಸ್ಯೆ ಆಲಿಸುತ್ತಿಲ್ಲ. ನೀರಿಗಾಗಿ ಪ್ರತಿವರ್ಷ ಹೋರಾಟ ಮಾಡುವ ಪರಿಸ್ಥಿತಿ ಇದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ರೈತರನ್ನು ಮೂಲೆಗುಂಪು ಮಾಡುತ್ತಿವೆ. ಚಿಮ್ಮಲಗಿ ಏತ ನೀರಾವರಿ 20 ವರ್ಷವಾದರೂ ನೀರು ಹರಿಯುತ್ತಿಲ್ಲ. 1500 ಕೋಟಿ ರೂ.ವೆಚ್ಚದ ಬೂದಿಹಾಳ ಪೀರಾಪೂರ ಯೋಜನೆ ಪೂರ್ಣಗೊಂಡಿಲ್ಲ. ರೈತರೆಲ್ಲರೂ ಹೋರಾಟ ಮಾಡುತ್ತಿದ್ದ ಸಮಯದಲ್ಲಿ 200 ಕೋಟಿ ರೂ. ಜುಜಬಿ ಅದನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿ 9 ತಿಂಗಳು ಕಳೆಯಲು ಬಂದರೂ ಕಾಮಗಾರಿ ಪ್ರಾರಂಭವಾಗಿಲ್ಲಾ ಹಣ ಕೊಡಿಸಲು ಉಸ್ತುವಾರಿ ಸಚಿವರಿಂದ ಆಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು. ಬೆಳೆವಿಮೆಗೆ ಸಂಬಂಧಿಸಿದಂತೆ ವಿಜಯಪುರದ ಉಪ ಕೃಷಿ ನಿರ್ದೇಶಕ ಶರಣಗೌಡ ಆರ್ ರೈತರಿಗೆ ಮಾಹಿತಿ ನೀಡಿದರು. ಹೋರಾಟಗಾರರ ಪ್ರಶ್ನೆಗಳಿಗೆ ಆಯಾ ಇಲಾಖೆಯ ಅಧಿಕಾರಿಗಳು ಉತ್ತರ ನೀಡಿದರಲ್ಲದೇ ಎಲ್ಲ ಸಮಸ್ಯೆ ಪರಿಹಾರಕ್ಕೆ ಒಂದು ತಿಂಗಳ ಕಾಲಾವಕಾಶ ಕೋರಿದರು.

ಹೋರಾಟದಲ್ಲಿ ರೈತ ಸಂಘದ ವೀರಪ್ಪ ಕುಳೆಕುಮಟಗಿ, ಶಿವಾನಂದಯ್ಯ ಹಿರೇಮಠ, ತಾಲೂಕಾಧ್ಯಕ್ಷ ಶ್ರೀಶೈಲ ವಾಲಿಕಾರ, ದೇವರಾಜ ಗುಂಡಕನಾಳ, ಮಹಿಬೂಬ ಅವಟಿ, ಉಮೇಶ ಮೊಕಾಳೆ, ಶಿವಾರಾಜ ಉಳ್ಳಾಗಡ್ಡಿ, ಮೂಕಿಹಾಳ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ರೈತ ಪ್ರಮುಖರಾದ ಮಲ್ಲಯ್ಯ ಹಿರೇಮಠ, ನಿಂಗಪ್ಪ ಕೆಂಭಾವಿ, ಸಂಗಣ್ಣ ಬಿರಾದಾರ, ಪಟೇಲ್ ಮೂಕಿಹಾಳ, ಬಸವರಾಜ ಪಾಟೀಲ ಬಳವಾಟ, ನಾಗೇಶ, ಶಿವರಾಜ ಗುಗ್ಗಳ್ಳಿ ಮೊದಲಾದವರು ಪಾಲ್ಗೊಂಡಿದ್ದರು.




### ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲು ಆಗ್ರಹ

ಪಂಚಾಯಿತಿ ವ್ಯಾಪ್ತಿಯಲ್ಲಿ ಶಿವಪೂರ ಗ್ರಾಮದಲ್ಲಿ ಕಳ್ಳಬಟ್ಟಿ ಸಾರಾಯಿ ಮಾರಾಟದಿಂದ ಹತ್ತು ಜನರು ಅಸುನೀಗಿದ್ದಾರೆ. ಅಬಕಾರಿ ಇಲಾಖೆಯ ಅಧಿಕಾರಿಗಳು ಎಲ್ಲೆಂದರಲ್ಲಿ ಅಕ್ರಮವಾಗಿ ಮಾರಾಟವಾಗುತ್ತಿರುವ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬೇಕು. ಸರಕಾರಿ ಗೋಮಾಳ ಜಾಗೆಯ ಅತಿಕ್ರಮಣ ತೆರವುಗೊಳಿಸಬೇಕು. ಗ್ರಾಪಂ ವ್ಯಾಪ್ತಿಯಲ್ಲಿ ಮನೆಗಳ ಹಂಚಿಕೆ ಪಾರದರ್ಶಕವಾಗಿ ನಡೆಯಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಹೋರಾಟಗಾರರು ಆಗ್ರಹಿಸಿದರು.

### ಅಧಿಕಾರಿಗಳ ತಂಡ ಪ್ರತ್ಯಕ್ಷ

ರೈತರ ಹೋರಾಟ ವೇದಿಕೆಗೆ ತಹಶೀಲ್ದಾರ್ ವಿನಯಾ ಹೂಗಾರ, ತಾಪಂ ಇಒ ಅನಸೂಯಾ ಚಲವಾದಿ, ವಿವಿಧ ಇಲಾಖೆಯ ಅಧಿಕಾರಿಗಳಾದ ಚಂದ್ರಕಾಂತ ಕುಂಬಾರ, ಎಸ್.ಎಸ್.ಕೋಟೆಣ್ಣವರ, ರಮೇಶ ಕೋಲಾರ, ಆರ್.ಎಸ್.ಹಿರೇಗೌಡರ, ಜ್ಞಾನೇಶ ಮುರಾಳ, ಮಹೇಶ ಜೋಷಿ, ವಿಜಯಕುಮಾರ ಬಿರಾದಾರ, ಎಸ್.ಡಿ.ಭಾವಿಕಟ್ಟಿ, ಗಿರೀಶ ಅಲಕುಡೆ, ಲಕ್ಷ್ಮಣ ಸಂಗೋಗಿ ಮೊದಲಾದವರು ಆಗಮಿಸಿ ಹೋರಾಟಗಾರರ ಪ್ರಶ್ನೆಗಳಿಗೆ ಉತ್ತರಿಸಿದರು.



## ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಸಲಹೆ

# ಅರ್ಹ ಮತದಾರರು ಮತದಾರ ಪಟ್ಟಿಯಿಂದ ಹೊರಗುಳಿಯಬಾರದು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ರಾಜ್ಯಾದ್ಯಂತ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ(–ಖಙಖ) ಪ್ರಾರಂಭವಾಗಿದ್ದು, ಇಂದು ಬುಧವಾರ ತಮ್ಮ ಗೃಹ ಕಚೇರಿಗೆ ಆಗಮಿಸಿದ ಬಿ.ಎಲ್.ಓ ಗಳಿಗೆ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ತಮ್ಮ ಮತ್ತು ತಮ್ಮ ಕುಟುಂಬ ಸದಸ್ಯರ ಅಗತ್ಯ ದಾಖಲೆ ಮತ್ತು ಮಾಹಿತಿ ನೀಡಿ ನೋಂದಣಿ ಪ್ರಕ್ರಿಯೆಯಲ್ಲಿ ಭಾಗಿಯಾದರು.

ಬಳಿಕ ಮಾತನಾಡಿದ ಅವರು, ಅರ್ಹ ಯಾವೊಬ್ಬ ಮತದಾರರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯಬಾರದು. ಬೇರೆ ಊರುಗಳಲ್ಲಿ ಉದ್ಯೋಗದಲ್ಲಿರು ಜನರು, ಗುಳೆ ಹೋದವರು ಸೇರಿದಂತೆ ಯಾರ ಹೆಸರನ್ನೂ ಕೈ ಬಿಡಬಾರದು. ನಾವೂ ಕೂಡ ಪಕ್ಷದಿಂದ ಜನಜಾಗೃತಿ ಮೂಡಿಸುತ್ತಿದ್ದೇವೆ. ಅರ್ಹ ಮತದಾರರು ತಮ್ಮ ಮನೆಗೆ ಬರುವ ಬೂತ್ ಮಟ್ಟದ ಅಧಿಕಾರಿಗಳಿಗೆ ಅಗತ್ಯ ದಾಖಲೆ ಮತ್ತು ಮಾಹಿತಿ ನೀಡಿ ಸಹಕರಿಸಬೇಕು. ಮತದಾರರ ಪಟ್ಟಿಯಲ್ಲಿ ವಿವರಗಳು ಪಟ್ಟಿಯಲ್ಲಿ ಸರಿಯಾಗಿ ದಾಖಲಾಗಿರುವ ಕು–ರಿತು ಖಚಿತಪಡಿಸಿಕೊಳ್ಳಬೇಕು. ಈ ಮೂಲಕ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು. ಮತ ಪ್ರತಿಯೊಬ್ಬರ ಹಕ್ಕಾಗಿದ್ದು, ಪ್ರತಿಯೊಂದು ಮತ ರಾಜ್ಯ ಮತ್ತು ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಪ್ರತಿಯೊಬ್ಬರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ದಾಖಲಾಗಿರುವ ಕುರಿತು ಖಚಿತ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಅನರ್ಹರು, ಎರಡು ಕಡೆ ಹೆಸರು ಹೊಂದಿರುವವರ ವ್ಯಕ್ತಿಗಳ ಒಂದು ಕಡೆಯ ಹೆಸರನ್ನು ಬೇಕಿದ್ದರೆ ತೆಗೆಯಲಿ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರಪಾಲಿಕೆ ಆಯುಕ್ತ ಮತ್ತು ವಿಜಯಪುರ ನಗರ ವಿಧಾನಸಭೆ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿ ವಿಜಯಕುಮಾರ ಮೆಕ್ಕಳಕಿ, ವಿಜಯಪುರ ನಗರ ಮತಕ್ಷೇತ್ರದ ಮತಗಟ್ಟೆ ಸಂಖ್ಯೆ 46ರ ಬಿ.ಎಲ್.ಓ ಎ. ಎಚ್. ಬಿಜ್ಜೂರ, ಮೇಲ್ವಿಚಾರಕ ಸುರೇಶ ಬಿರಾದಾರ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಚಿಮ್ಮಡ ಗ್ರಾಮದ ಸರಕಾರಿ ಪಪೂ ವಿದ್ಯಾಲಯ | ಉಪನ್ಯಾಸಕರ ಕೊರತೆಯಿಂದ ಬಳಲುತ್ತಿರುವ ಕಾಲೇಜು

# ಆರಂಭವಾಗಿ ಆರು ವರ್ಷವಾದರೂ ಸ್ವಂತ ಸೂರಿಲ್ಲದ ವಿದ್ಯಾಲಯ

■ ಉದಯರಶ್ಮಿ ದಿನಪತ್ರಿಕೆ

ವರದಿ: ಇಲಾಹಿ ಇ. ಜಮಖಂಡಿ

ಚಿಮ್ಮಡ: ಗ್ರಾಮದ ಸರಕಾರಿ ಪದವಿಪೂರ್ವ ವಿದ್ಯಾಲಯಕ್ಕೆ ಪ್ರಾಚಾರ್ಯರು, ಉಪನ್ಯಾಸಕರೂ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಬಳಲುತಿದ್ದು, ವಿದ್ಯಾಲಯದ ಕಟ್ಟಡ ಹಾಗೂ ಸಮರ್ಪಕ ಸಿಬ್ಬಂದಿಗಳಿಲ್ಲದೆ ಉತ್ತಮ ಶಿಕ್ಷಣದಿಂದ ವಿದ್ಯಾರ್ಥಿಗಳು ವಂಚಿತರಾಗುತಿದ್ದಾರೆ.

ರಬಕವಿ–ಬನಹಟ್ಟಿ ತಾಲೂಕಿನಲ್ಲಿಯೇ ದೊಡ್ಡ ಗ್ರಾಮವಾಗಿರುವ ಚಿಮ್ಮಡ ಗ್ರಾಮಕ್ಕೆ ಕಳೆದ ಐದು ವರ್ಷಗಳ ಹಿಂದೆ ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ನೇಸ್ವಿ ಗ್ರಾಮದಿಂದ ಸ್ಥಳಾಂತರಗೊಂಡ ಈ ಸರಕಾರಿ ಪದವಿಪೂರ್ವ ವಿದ್ಯಾಲಯಕ್ಕೆ ಇದುವರೆಗೆ ಸಮರ್ಪಕ ಉಪನ್ಯಾಸಕರ ನೇಮಕವಾಗಿಲ್ಲ, ಈ




ವಿದ್ಯಾಲಯಕ್ಕೆ ಮಂಜೂರಾಗಿರುವ ಪ್ರಾಚಾರ್ಯ, ಇಂಗ್ಲಿಷ್, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಹಾಗೂ "ಡಿ"ದರ್ಜೆಯ ಹುದ್ದೆಗಳಲ್ಲಿ ಕೇವಲ ಒಬ್ಬ ಉಪನ್ಯಾಸಕರು, ಹಾಗೂ ಓರ್ವ "ಡಿ"ದರ್ಜೆಯ ನೌಕರರು ಮಾತ್ರ ಕಾರ್ಯ ನಿರ್ವಹಿಸುತಿದ್ದು, ಉಳಿದಂತೆ ಮೂವರು ಅತಿಥಿ ಉಪನ್ಯಾಸಕರು ನೇಮಕಗೊಂಡಿದ್ದಾರೆ. ವಿದ್ಯಾಲಯಕ್ಕೆ ಅತೀ ಅವಶ್ಯವಿರುವ ಪ್ರಾಚಾರ್ಯ ಹುದ್ದೆ ಹಾಗೂ ಪ್ರಥಮ ಅಥವಾ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳು ಖಾಲಿ ಇರುವುದರಿಂದ ಇರುವ ಉಪನ್ಯಾಸಕರೇ ಆ ಕಾರ್ಯಗಳನ್ನು ನಿಭಾಯಿಸಬೇಕಾಗಿರುವುದ–ರಿಂದ ತೀವ್ರ ತೊಂದರೆಯಾಗಿದೆ, ಪ್ರಸಕ್ತ ಸಾಲಿನಲ್ಲಿ 170ಕ್ಕೂ ಅಧಿಕ ವಿದ್ಯಾರ್ಥಿಗಳು ಕಲಾ ಹಾಗೂ ವಾಣಿಜ್ಯ ವಿಭಾಗದಲ್ಲಿ ಪ್ರವೇಶ ಪಡೆದಿದ್ದು ವಿದ್ಯಾರ್ಥಿಗಳಿಗೆ ಸ್ಥಳಿಯ ಸರಕಾರಿ ಪ್ರೌಢಶಾಲೆಯ ಎರಡು ಕೊಠಡಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಒಂಡು ಇಕ್ಕಟ್ಟಾದ ಕಟ್ಟಡಗಳಲ್ಲಿ ಪಾಠಭೋದನೆ ಮಾಡಲಾಗುತಿದ್ದು, ಸ್ವಂತ ಸೂರು ಹಾಗೂ ಸಮರ್ಪಕ ಸೌಲಭ್ಯಗಳಿಲ್ಲದೆ ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆಯಾಗುತ್ತಿದ್ದು, ಸರಕಾರ ಈ ಕುರಿತು ಕೂಡಲೆ ಕ್ರಮವಹಿಸಿ ಈ ಶಾಲೆಗೆ ಇನ್ನುಳಿದ ಅಗತ್ಯ ಹುದ್ದೆಗಳಾದ ಕನ್ನಡ, ಇತಿಹಾಸ, ವಾಣಿಜ್ಯಶಾಸ್ತ್ರ, ಹಾಗೂ ಪ್ರಥಮ ಅಥವಾ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಮಂಜೂರು ಮಾಡಿ ಈ ವಿದ್ಯಾಲಯವನ್ನು ಕರ್ನಾಟಕ ಪಬ್ಲಿಕ್ ಸ್ಕೂಲ ವ್ಯಾಪ್ತಿಗೆ ಸೇರಿಸಿ ಗ್ರಾಮದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕೆಂದು ಗ್ರಾಮದ ನಾಗರಿಕರು ಒತ್ತಾಯಿಸಿದ್ದಾರೆ.

"ಗ್ರಾಮದ ಸರಕಾರಿ ಪದವಿಪೂರ್ವ ವಿದ್ಯಾಲಯಕ್ಕೆ ಅಗತ್ಯ ಉಪನ್ಯಾಸಕ ಹುದ್ದೆಗಳೂ, ತಾಂತ್ರಿಕ ಸಿಬ್ಬಂದಿ ಹಾಗೂ ಸ್ವಂತ ಕಟ್ಟಡ ನಿರ್ಮಿಸಿ ಕೊಡುವಂತೆ ಹಲವಾರು ಬಾರಿ ಲಿಖಿತ ಹಾಗೂ ಮೌಖಿಕವಾಗಿ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮನವಿ ಮಾಡಿದರೂ ಇದುವರೆಗೆ ಪ್ರಯೋಜನವಾಗಿರುವುದಿಲ್ಲ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆಯಾಗುತ್ತಿದೆ. ಅಲ್ಲದೇ ವಿದ್ಯಾರ್ಥಿಗಳು ಪದವಿಪೂರ್ವ ವಿದ್ಯಾರ್ಜನೆಗಾಗಿ ಪರಸ್ಥಳಗಳಿಗೆ ತೆರಳುವಂತಾಗಿದೆ.

■ ಅವ್ವನೆಪ್ಪ ಮುಗಳಖೋಡ
ಅಧ್ಯಕ್ಷರು, ಕಾಲೇಜು ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮೀತಿ.

ಗ್ರಾಮದ ಸರಕಾರಿ ಪದವಿಪೂರ್ವ ವಿದ್ಯಾಲಯದಲ್ಲಿ ಉಪನ್ಯಾಸಕರ ಕೊರತೆ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯ ನಡುವೆಯೂ ಪ್ರಸಕ್ತ ಸಾಲಿನ ಫಲಿತಾಂಶದ ಕಲಾ ವಿಭಾಗದಲ್ಲಿ ಶೇ.100 ಫಲತಾಂಶ ಹಾಗೂ ವಾಣಿಜ್ಯ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ್ದು ಅಗತ್ಯ ಸೌಲಭ್ಯ ದೊರೆತಲ್ಲಿ ಈ ಕಾಲೇಜು ಇನ್ನೂ ಹೆಚ್ಚಿನ ಸಾಧನೆ ಮಾಡಲಿದೆ.

■ - ಶ್ರೀಮತಿ ಎಸ್.ಕೆ. ರಾಠೋಡ
ಪ್ರಭಾರ ಪ್ರಾಚಾರ್ಯರು.

# ಸ್ನಾತಕ ಪದವಿ ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026–27 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿ.ವಿ.ಎ. ದೃಶ್ಯ ಕಲೆಯಲ್ಲಿ ನಾಲ್ಕು ವರ್ಷದ ಎಂಟು ಸೆಮ್ ಗಳ 'ರಾಜ್ಯ ಶಿಕ್ಷಣ ಪದ್ಧತಿ' ಯಂತೆ ಸ್ನಾತಕ ಪದವಿ ಪ್ರವೇಶಕ್ಕೆ ದ್ವಿತೀಯ ಪಿ.ಯು.ಸಿ. ಇಲ್ಲವೇ ಸಮಾನಾಂತರ ಕೋರ್ಸುಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ ಮೈಸೂರು ವಿಶ್ವವಿದ್ಯಾಲಯ ಆನ್ ಲೈನ್ ಅರ್ಜಿ ಆಹ್ವಾನಿಸಿದೆ.

https://uucms.karnataka.gov.in ಈ ವೆಬ್ ಸೈಟ್‌ನಲ್ಲಿ ಅಭ್ಯರ್ಥಿಗಳು ಜುಲೈ 4 ರವರೆಗೆ (ದಂಡ ಶುಲ್ಕದೊಂದಿಗೆ) ಅರ್ಜಿ ಸಲ್ಲಿಸಬಹುದಾಗಿದೆ.ಈ ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಷಯಗಳಲ್ಲಿ ವಿಶೇಷ ಅಧ್ಯಯನ ಮಾಡಬೇಕಾಗುತ್ತದೆ.

ಪ್ರವೇಶಾತಿ ಕೋರಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹತಾ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನವನ್ನು ಜುಲೈ 6 ರಂದು ನಡೆಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ: 0821–2438931 ಸಂಪರ್ಕಿಸಬಹುದು ಎಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ಡೀನ್‌ರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಸಕ ಶಿವಾನಂದರಿಗೆ ಅಧಿಕಾರಿಗಳಿಂದ ಗಣತಿ ನಮೂನೆ ವಿತರಣೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಅಂಗವಾಗಿ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಇಂದು ಮಾಜಿ ಸಚಿವರು ಹಾಗೂ ಶಾಸಕರಾದ ಶಿವಾನಂದ ಪಾಟೀಲ ಅವರ ನಿವಾಸಕ್ಕೆ ಭೇಟಿ ನೀಡಿ ಮತದಾರರ ಗಣತಿ ನಮೂನೆಗಳನ್ನು ವಿತರಿಸಿದರು. ಮನೆ–ಮನೆಗೆ ತೆರಳಿ ಗಣತಿ ನಮೂನೆಗಳನ್ನು ವಿತರಿಸುವ ಕಾರ್ಯ ಆರಂಭವಾಗಿರುವದರಿಂದ ಶಾಸಕ ಶಿವಾನಂದ ಪಾಟೀಲ ಅವರ ನಿವಾಸಕ್ಕೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಆಯುಕ್ತರಾದ ವಿಜಯ ಮೆಕ್ಕಳಕಿ ಹಾಗೂ ಸಂಬಂಧಿತ ಬೂತ್ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



# ವಿಚಾರಗಳು ಜಗತ್ತನ್ನು ಆಳುತ್ತವೆ: ಚನ್ನಶೆಟ್ಟಿ

ಬೀದರ್:ವಿಶ್ವ ಶಾಂತಿ ನೀಡಿದ ಗೌತಮ ಬುದ್ಧ, ಭಕ್ತಿಭಂಡಾರಿ ಅಣ್ಣ ಬಸವಣ್ಣ ಮತ್ತು ವಿಶ್ವ ಜ್ಞಾನಿ ಡಾ.ಅಂಬೇಡ್ಕರ್ ಅವರ ವಿಚಾರಗಳು ಎಂದಿಗಿಂತಲೂ ಇಂದು ಹೆಚ್ಚು ಅವಶ್ಯಕವಾಗಿವೆ. ವಿಚಾರಗಳು ಜಗತ್ತನ್ನು ಆಳುತ್ತವೆ ಎಂದು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ಚನಶೆಟ್ಟಿ ಹೇಳಿದರು.

ಕಲಬುರಗಿಯ ಸಿದ್ಧಾರ್ಥ ಪ್ರಕಾಶನದಿಂದ, ಬುದ್ಧ ಬಸವ ಅಂಬೇಡ್ಕರ ವಿಚಾರಧಾರೆ, ಬುದ್ಧಿಷ್ಟ ಮಕ್ಕಳ ಹೆಸರಿನ ಲೋಕ, ಡಾ.ಅಂಬೇಡ್ಕರ್ ಮಹಾ ಪರಿನಿರ್ವಾಣ ಗ್ರಂಥಗಳನ್ನು ಸಮರ್ಪಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಇಂದಿನ ಸಮಾಜಕ್ಕೆ ಈ ಮೌಲಿಕ ಕೃತಿಗಳು ದಿವ್ಯ ಔಷಧಿಯಾಗಿವೆ. ಇವುಗಳು ಶಾಲಾ ಕಾಲೇಜು ಮಕ್ಕಳಿಗೆ ಬಹು ಉಪಯುಕ್ತ ಗ್ರಂಥಗಳಾಗಿವೆಂದರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಸಂಚಾಲಕರಾದ ಮಾರುತಿ ಬೌದ್ಧೆ ಅವರು ಅಧ್ಯಕ್ಷತೆ ವಹಿಸಿ, ಇಂದಿನ ಯುವ ಜನಾಂಗವೂ ಇಂತಹ ಮಾನವೀಯ ಮೌಲಿಕ ಪುಸ್ತಕವನ್ನು ಅಧ್ಯಯನ, ಅಧ್ಯಾಪನ ಮಾಡುವ ಮೂಲಕ ಈ ತ್ರಿಮೂರ್ತಿಗಳು ನಡೆದ ದಾರಿ, ನುಡಿದ ಅಮರ ಸಂದೇಶದಂತೆ ನಡೆಯಲು ಬುದ್ಧಿಷ್ಟ ಮಕ್ಕಳ ಹೆಸರಿನ ಲೋಕ ಪುಸ್ತಕವೂ ಡಾ.ಅಂಬೇಡ್ಕರ್ ರವರ ಕನಸಾದ ಭಾರತ ಬೌದ್ಧ ಮಯ ಮಾಡುವ ಉದ್ದೇಶಕ್ಕೆ ಪೂರಕವಾದ ಮಹಾನ ಗ್ರಂಥವಾಗಿದೆ ಎಂದರು.

ಮೊದಲಿಗೆ ಡಾ.ಕೆ.ಎಸ್.ಬಂಧು.ಸಿದ್ದೇಶ್ವರ ರವರು ಸ್ವಾಗತ ಕೋರಿದರು. ಜಗದೀಶ ತ್ಯಾಗವೀರ ಅವರು ನಿರೂಪಣೆ ಮಾಡಿದರೆ, ಬಸವರಾಜ ಬಂಧು ವಂದಾನಾರಪಣೆ ಗೈದರು. ಡಿ.ಎಸ್.ಎಸ್ ಪದಾದಿಕಾರಿಗಳು ಉಪಸ್ಥಿತರಿದ್ದರು.

# ಮತದಾರರ ಪಟ್ಟಿ ಪರಿಷ್ಕರಣೆ: ಸಾರ್ವಜನಿಕರ ಸಹಕಾರಕ್ಕೆ ಮನವಿ



ಕಲಬುರಗಿ: ಜಿಲ್ಲೆಯಲ್ಲಿ ಮ್ಯಾಪಿಂಗ್ ಪ್ರಕ್ರಿಯೆ ಯಶಸ್ವಿಯಾಗಿ ಮುಗಿದಿದ್ದು, ಪ್ರಸ್ತುತ 3ನೇ ಹಂತದ ಮತದಾರರ ಪಟ್ಟಿ ಪರಿಷ್ಕರಣೆ (ಖಖಖ) ಕಾರ್ಯ ಪ್ರಗತಿಯಲ್ಲಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಮನೆ–ಮನೆಗೆ ಭೇಟಿ ನೀಡಿ 'ಎನ್ಯುಮರೇಷನ್ ಫಾರ್ಮ್' ಭರ್ತಿ ಮಾಡುತ್ತಿದ್ದು, ಸಾರ್ವಜನಿಕರು ಯಾವುದೇ ಅಪಪ್ರಚಾರಗಳಿಗೆ ಕಿವಿಗೊಡದೆ ಪೂರ್ಣ ಸಹಕಾರ ನೀಡಬೇಕೆಂದು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಎಸ್ ಸಂಕನೂರ ಹೇಳಿದರು.

ಸೋಮವಾರ ನಗರದ ಜಗತ್ ವೃತ್ತದಲ್ಲಿವ ಭಾರತದ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿಗಳು ಕರ್ನಾಟಕ, ಜಿಲ್ಲಾಡಳಿತ ಮತ್ತು ಜಿಲ್ಲಾ ಸ್ವೀಪ (ಖಗಿಇಕ) ಸಮಿತಿ ಮತ್ತು ಸರಕಾರಿ ಮಹಾವಿದ್ಯಾಲಯ,(ಸ್ವಾಯತ) ಕಾಲೇಜು ಕಲಬುರಗಿ ಇವರ ಸಂಯಕ್ತಾಶ್ರಯದಲ್ಲಿ ಆಯೋಜಿಸಿದ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ–2026ರ ಬೈಕ್ ರ್ಯಾಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಊರಿನಲ್ಲಿ ಇಲ್ಲದವರನ್ನು ಫೋನ್ ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಲಾಗುತ್ತಿದ್ದು, ಈ ಕಾರ್ಯದಲ್ಲಿ ಶಿಕ್ಷಕರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಶ್ರಮಿಸುತ್ತಿದ್ದಾರೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ, 2026ರ ಜೂನ್ 30 ರಿಂದ ಜುಲೈ 30ರವರೆಗೆ ನಡೆಯಲಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣಾ ಕಾರ್ಯಕ್ರಮದ ಬಗ್ಗೆ ಜನ ಸಾಮಾನ್ಯರಿಗೆ ಅರಿವು ಮೂಡಿಸುವುದು ಮತ್ತು ಅರ್ಹರಾದ ಪ್ರತಿಯೊಬ್ಬ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಹಾಗೂ ಅಧ್ಯಕ್ಷರು ಜಿಲ್ಲಾ ಸ್ವೀಪ್ ಸಮಿತಿ ಕಲಬುರಗಿ ರವರು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ, ದಿನಾಂಕ: 30–06–2026 ರಿಂದ 29–07–2026 ರವರೆಗೆ ಮತಗಟ್ಟೆ ಮಟ್ಟದ ಅಧಿಕಾರಿ (ಃಐಔ) ಗಳಿಂದ ಮನೆ ಮನೆ ಭೇಟಿ ನೀಡಿ ಇಟಜ–ಟಜಡಿಚಿಣುಂಟ ಈಂಡಿಟ &ಆಜಛಿಟಚಿಡಿಚಿಣುಂಟ ಈಂಡಿಟ(ಗಣತಿದಾರರ ನಮೂನೆಯನ್ನು ದ್ವಿಪ್ರತಿಯಲ್ಲಿ ನೀಡಲು ತಿಳಿಸಿದರು. ಹಾಗೂ ದೋಷರಹಿತ ಮತದಾರರ ಪಟ್ಟಿಗಳು ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ, ಪ್ರತಿಯೊಬ್ಬ ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ಹೊರಗುಳಿಯಬಾರದು ಎಂದು ಮಾತನಾಡಿದರು

ವಿಶೇಷ ಸಮಗ್ರ ಪರಿಷ್ಕರಣೆ, ಕುರಿತು ಕಲಬುರಗಿ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ಕುರಿತು ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ,ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ,ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಕಲಬುರಗಿ ಇವರ ಸಹಯೋಗದೊಂದಿಗೆ ಜಿಲ್ಲೆಯ ಜನರಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಖ.ಖ.ಖ), ಕುರಿತು ಅರಿವು ಮೂಡಿಸಲು ಜಗತ ವೃತ್ತದಿಂದ ಅನ್ನಪೂರ್ಣ ಕ್ರಾಸ, ಲಾಹೋಟಿ ಪೆಟ್ರೋಲ್ ಬಂಕ ದಿಂದ ತಿಮ್ಮಾಪೂರ ಸರ್ಕರ ದಿಂದ ಜಗೃತ್ ವೃತದವರೆಗೆ ಮುಕ್ತಾಯವಾಯಿತು.

ಬೈಕ್ ರ್ಯಾಲಿಗೆ ಮಹಾನಗರ ಪಾಲಿಕೆಯ ಆಯುಕ್ತರಾದ ಅವಿನಾಶ ಶಿಂಧೆ, ಸ್ವೀಪ್ ನೋಡಲ್ ಅದ್ಯಕ್ಷರಾದ ಜಿ.ಪಂ. ಉಪಕಾರ್ಯದರ್ಶಿ ಲಕ್ಷ??ಣ ಶೃಂಗೇರಿ ಜಿ.ಪಂ. ಯೋಜನಾ ನಿರ್ದೇಶಕ ಜಗದೇವಪ್ಪ, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ, ಚೆನ್ನಪ್ಪ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಾನಪ್ಪ ಕಟ್ಟಿಮನಿ, ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆಯ ಕಛೇ–ರಿಯ ಅಧಿಕಾರಿ, ಪದವಿ ಕಾಲೇಜು.ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಅಧಿಕಾರಿ, ಪದವಿ ಕಾಲೇಜಿನ್ ಉಪನ್ಯಾಸಕರು, ಅಂಗವಿಕಲರು, ಬಿ.ಎಲ್.ಒ.ಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

# ವಲಸಿಗರು, ಬಡವರು, ಅಲ್ಪಸಂಖ್ಯಾತರ ಮತದಾನದ ಹಕ್ಕು ರಕ್ಷಿಸಿ: ಬಿ.ಆರ್. ಪಾಟೀಲ



ಆಳಂದ: ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಮತದಾರ ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಅಧಿಕಾ–ರಿಗಳು, ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ರಾಜ್ಯದ ಕಾಂಗ್ರೆಸ್‌ನ ಹಿರಿಯ ಶಾಸಕ ಹಾಗೂ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಎಸ್‌ಐಆರ್ ಕು–ರಿತು ವಿಸ್ತೃತವಾಗಿ ಮಾತನಾಡಿದ ಅವರು, ಮತದಾನದ ಹಕ್ಕು ಪ್ರತಿಯೊಬ್ಬ ನಾಗರಿಕನ ಸಂವಿಧಾನಬದ್ಧ ಮತ್ತು ಪ್ರಜಾಪ್ರಭುತ್ವದ ಮೂಲಭೂತ ಹಕ್ಕಾಗಿದೆ. ಮತದಾರರ ಪಟ್ಟಿಯ ಪರಿಷ್ಕರಣೆ ಹೆಸರಿನಲ್ಲಿ ಅರ್ಹ ಮತದಾರರ ಹೆಸರುಗಳನ್ನು ಕೈಬಿಡುವುದು ಅಥವಾ ಮತದಾನದ ಹಕ್ಕಿನಿಂದ ವಂಚಿಸುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದ್ದು, ಎಸ್‌ಐಆರ್ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ, ನ್ಯಾಯಸಮ್ಮತ ಹಾಗೂ ಪಕ್ಷಾತೀತ ರೀತಿಯಲ್ಲಿ ನಡೆಯಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ಎಸ್‌ಐಆರ್ ಯಶಸ್ವಿ ಅನುಷ್ಠಾನಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದೆ. ವಿವಿಧ ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟರು (ಬಿಎಲ್‌ಎಗಳು), ಚುನಾವಣಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಈ ಪ್ರಕ್ರಿಯೆಯ ಮೂಲ ಉದ್ದೇಶ ಅರ್ಹ ಮತದಾರರೊಬ್ಬರೂ ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳುವುದಾಗಿದೆ ಎಂದು ತಿಳಿಸಿದರು. ಇಂದು ಸಾವಿರಾರು ಜನರು ಉದ್ಯೋಗ, ಶಿಕ್ಷಣ ಮತ್ತು ಜೀವನೋಪಾಯಕ್ಕಾಗಿ ಬೆಂಗಳೂರು, ಮುಂಬೈ, ಪುಣೆ, ಹೈದರಾಬಾದ್ ಸೇರಿದಂತೆ ವಿವಿಧ ಮಹಾನಗರಗಳಿಗೆ ವಲಸೆ ಹೋಗಿದ್ದಾರೆ. ಅವರು ತಾತ್ಕಾಲಿಕವಾಗಿ ಹೊರರಾಜ್ಯ ಅಥವಾ ಹೊರಜಿಲ್ಲೆಗಳಲ್ಲಿ ನೆಲೆಸಿದ್ದರೂ ಅವರ ಮತದಾನದ ಹಕ್ಕು ಅಬಾಧಿತವಾಗಿರಬೇಕು. ಕುಟುಂಬದ ಸದಸ್ಯರು ಅಗತ್ಯ ದಾಖಲೆಗಳು ಹಾಗೂ ಮಾಹಿತಿ ಒದಗಿಸಿ ಅವರ ಹೆಸರು ಮತದಾರರ ಪಟ್ಟಿಯಲ್ಲಿ ಮುಂದುವರಿಯುವಂತೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ವಲಸೆ ಹೋದವರು, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರು ಸೇರಿದಂತೆ ಯಾವುದೇ ವರ್ಗದ ಮತದಾರರಿಗೆ ಅನ್ಯಾಯವಾಗದಂತೆ ಅಧಿಕಾರಿಗಳು ವಿಶೇಷ ಮುನ್ನೆಚ್ಚರಿಕೆ ವಹಿಸಬೇಕು. ಯಾವುದೇ ರೀತಿಯ ನಿರ್ಲಕ್ಷ್ಯ, ಪಕ್ಷಪಾತ ಅಥವಾ ತಾಂತ್ರಿಕ ಕಾರಣಗಳಿಂದ ಅರ್ಹ ಮತದಾರರು ಮತದಾನದ ಹಕ್ಕು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ಹೇಳಿದರು.

ಪ್ರಜಾಪ್ರಭುತ್ವದ ಶಕ್ತಿ ಮತದಾರನಲ್ಲಿದೆ. ಮತದಾರರ ಪಟ್ಟಿಯೇ ಚುನಾವಣಾ ವ್ಯವಸ್ಥೆಯ ಜೀವಾಳವಾಗಿದೆ. ಆದ್ದರಿಂದ ಪ್ರತಿಯೊಬ್ಬ ನಾಗರಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿದೆಯೇ ಎಂಬುದನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಯಾವುದೇ ಲೋಪ ಕಂಡುಬಂದರೆ ಕೂಡಲೇ ಸಂಬಂಧಿತ ಅಧಿಕಾರಿಗಳನ್ನು ಸಂಪರ್ಕಿಸಿ ತಿದ್ದುಪಡಿ ಮಾಡಿಸಿಕೊಳ್ಳಬೇಕು.

# ನೋಟ ಬದಲಾದರೆ, ಬದುಕು ಬದಲು

## ಜಯ್ ನುಡಿ (ವ್ಯಕ್ತಿತ್ವ ವಿಕಸನ ಕುರಿತ ಲೇಖನ ಮಾಲಿಕೆ)

■ ಉದಯರಶ್ಮಿ ದಿನಪತ್ರಿಕೆ

ಬದುಕಿನಲ್ಲಿ ಎದುರಾಗುವ ಸಮಸ್ಯೆಗಳು, ಸವಾಲುಗಳು, ಕಷ್ಟಗಳು ಎಲ್ಲರಿಗೂ ಹೆಚ್ಚು ಕಡಿಮೆ ಒಂದೇ ಆಗಿರುತ್ತವೆ. ಆದರೆ ನಾವು ಆ ಸವಾಲುಗಳನ್ನು ಕಷ್ಟಗಳನ್ನು ಹೇಗೆ ನೋಡುತ್ತೇವೆ ಎನ್ನುವುದು ನಮ್ಮ ಜೀವನವನ್ನು ಬದಲಾಯಿಸುತ್ತದೆ. ನೇರವಾಗಿ ಹೇಳಬೇಕೆಂದರೆ ನಾವು ಸವಾಲುಗಳನ್ನು ನೋಡುವ ದೃಷ್ಟಿಕೋನ ನಮ್ಮ ಜೀವನದ ಯಶಸ್ಸನ್ನು ನಿರ್ಧರಿಸುತ್ತದೆ. ಕಷ್ಟಗಳಿಗೆ ಕುಗ್ಗುವವರು ಸಾಮಾನ್ಯರಾಗುತ್ತಾರೆ. ಕುಗ್ಗದ, ಕುಸಿಯದ ಸಾಮಾನ್ಯ ಜನರೇ ಅಸಾಮಾನ್ಯರಾಗುತ್ತಾರೆ. ಅಂದರೆ, ಅಸಾಮಾನ್ಯರು ಅದೇ ಸವಾಲುಗಳನ್ನು ನೋಡುವ ನೋಟವನ್ನು ಬದಲಿಸಿ ಗೆಲುವಿನ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮಹಾನ್ ಸಾಧಕರಾಗುತ್ತಾರೆ.

### ದೃಷ್ಟಿಕೋನವೆಂದರೆ..?

'ಬದುಕಿನಲ್ಲಿ ನಡೆವ ಘಟನೆಗಳನ್ನು ಸನ್ನಿವೇಶಗಳನ್ನು ನೋಡುವ, ಅರ್ಥೈಸಿಕೊಳ್ಳುವ ಮತ್ತು ಅವುಗಳಿಗೆ ಪ್ರತಿಕ್ರಿಯಿಸುವ ಒಂದು ವಿಶಿಷ್ಟವಾದ ಮಾನಸಿಕ ಶೈಲಿಯೇ ದೃಷ್ಟಿಕೋನ.' ಸರಳವಾಗಿ ಹೇಳಬೇಕೆಂದರೆ, 'ಪರಿಸ್ಥಿತಿಗಳು ಹೇಗಿವೆ ಎನ್ನುವುದಕ್ಕಿಂತ ಅವುಗಳನ್ನು ನಾವು ಹೇಗೆ ನೋಡುತ್ತೇವೆ ಎನ್ನುವುದೇ ದೃಷ್ಟಿಕೋನ.

ನಿಮ್ಮ ದೃಷ್ಟಿಕೋನವನ್ನು ದಿನನಿತ್ಯದ ಬದುಕಿನಲ್ಲಿ ಇನ್ನಷ್ಟು ಉತ್ತಮಗೊಳಿಸಲು ಇಲ್ಲಿವೆ ಕೆಲವು ಪ್ರಾಯೋಗಿಕ ಮತ್ತು ಸುಲಭ ಸಲಹೆಗಳು

### ದೈಹಿಕ ಭಂಗಿ



ದೇಹಕ್ಕೂ ಮನಸ್ಸಿಗೂ ನೇರ ಸಂಬಂಧವಿದೆ. ಮುಖ ಸಿಂಡರಿಸಿಕೊಂಡು ತಲೆ ಬಗ್ಗಿಸಿಕೊಂಡು ಕುಳಿತರೆ ಸಂತಸವೆಂದೂ ಉಕ್ಕುವುದಿಲ್ಲ. ಬದಲಿಗೆ ನಕಾರಾತ್ಮಕತೆ ಮನೆ ಮಾಡುತ್ತದೆ. ಯಾವುದೇ ಕ್ಷಣದಲ್ಲಿ ಬೇಸರ ಇಲ್ಲವೇ ನಿರಾಶೆಯ ಭಾವ ಮೂಡಿದರೆ ತಕ್ಷಣವೇ ನೆಟ್ಟಗೆ ನಿಂತುಕೊಳ್ಳಬೇಕು. ದೀರ್ಘವಾಗಿ ಉಸಿರಾಡಬೇಕು. ಅದರೊಂದಿಗೆ ಮುಖದಲ್ಲಿ ಸಣ್ಣದೊಂದು ಮುಗಳ್ನಗೆ ತಂದುಕೊಳ್ಳಬೇಕು. ಹೀಗೆ ಮಾಡುವುದರಿಂದ ದೃಷ್ಟಿಕೋನವನ್ನು ನಕಾರಾತ್ಮಕತೆಯಿಂದ ಸಕಾರಾತ್ಮಕತೆಯತ್ತ ಹೊರಳಿಸಬಹುದು.

### ಸಂಭಾಷಣೆ

ಅಮೇರಿಕಾದ ಪ್ರಸಿದ್ಧ ಲೇಖಕ ಚಾರ್ಲ್ಸ್ ಆರ್ ಸ್ವಿಂಡಾಲ್ ಹೇಳಿದಂತೆ 'ಬದುಕು ಎನ್ನುವುದು ಶೇಕಡಾ 10 ರಷ್ಟು ನಮಗೆ ಏನಾಗುತ್ತದೆ ಎಂಬುದು ಮತ್ತು ಶೇಕಡಾ 90 ರಷ್ಟು ನಾವು ಅದಕ್ಕೆ ಹೇಗೆ ಪ್ರತಿಕ್ರಿಯಿಸುತ್ತೇವೆ.' ಎಂಬುದಾಗಿದೆ ಎಂದಿದ್ದಾರೆ. 'ನನಗೆ ಯಾವಾಗಲೂ ಹೀಗೆ ಆಗುತ್ತದೆ.' 'ನನ್ನಿಂದಾಗದು,' ಹೀಗೆ ನಮ್ಮ ಜೊತೆ ನಾವು ಮಾತನಾಡಿಕೊಳ್ಳುತ್ತೇವೆ. ಈ ಎಲ್ಲ ನಕಾರಾತ್ಮಕ ಯೋಚನೆಗಳು ನಮ್ಮ ತಲೆಯಲ್ಲಿ ಬಂದಾಗ ಅದನ್ನು ಮುಂದುವರೆಸಿದರೆ ಅದು ನಕಾರತ್ಮಕ ಫಲವನ್ನು ನೀಡುತ್ತದೆ. ಅಂದರೆ ನಮ್ಮ ಆಲೋಚನೆಗಳು ನಕಾರಾತ್ಮಕವಾಗಿದ್ದರೆ ದೃಷ್ಟಿಕೋನವೂ ಕೆಡುತ್ತದೆ. ನಮ್ಮನ್ನು ಕೆಳಕ್ಕೆ ತಳ್ಳುವ ಆಲೋಚನೆಗಳು ಬಂದಾಗ, ಅದನ್ನು ತಕ್ಷಣವೇ 'ನನ್ನಿಂದ ಇದು ಖಂಡಿತ ಸಾಧ್ಯ.' ನಾನು ಇದನ್ನು ಕಲಿಯುತಿದ್ದೇನೆ.' ಇದನ್ನು ನಾನು ನಿಭಾಯಿಸಬಲ್ಲೆ ಎಂದೆಲ್ಲ ಸಕಾರಾತ್ಮಕವಾದ ಹೇಳಿಕೆಗಳನ್ನು ಹೇಳಿಕೊಳ್ಳುವುರ ಮೂಲಕ ನಕಾರಾತ್ಮಕ ಸಂಭಾಷಣೆಯನ್ನು ಧನಾತ್ಮಕವಾಗಿ ಬದಲಾಯಿಸಿಕೊಳ್ಳಬೇಕು.

### ಸಮಸ್ಯೆ


ನಾವು ಸದಾ ನೋಡುವುದು ಸಮಸ್ಯೆಯನ್ನೇ ಹೊರತು, ಅದರ ಪರಿಹಾರವನ್ನಲ್ಲ. ಸಮಸ್ಯೆಯ ಬಗ್ಗೆ ಯೋಚಿಸುತ್ತ ಕುಳಿತರೆ ಅದು ಇನ್ನಷ್ಟು ದೊಡ್ಡದಾಗಿ ಕಾಣುತ್ತದೆ. ಆದ್ದರಿಂದ ಏನಾದರೂ ಸಮಸ್ಯೆ ಬಂದಾಗ ' ಇದು ಏಕೆ ಆಯಿತು?' ಎಂದು ಕೊರಗುತ್ತ ಕುಳಿತುಕೊಳ್ಳುವ ಬದಲು, 'ಇದಕ್ಕೆ ಪರಿಹಾರವೇನು? ಸಮಸ್ಯೆಗೆ ನಾನು ಏನು ಮಾಡಿದರೆ ಇದರಿಂದ ಆಚೆ ಬರಬಲ್ಲೆ? ಎಂದೆಲ್ಲ ಯೋಚಿಸಲು ಪ್ರಾರಂಭಿಸಬೇಕು. ಕಠಿಣವಾದ ಕೆಲಸ ಸಿಕ್ಕಾಗ, ನನಗೆ ಯಾಕೆ ಈ ಕಷ್ಟ? ಎಂದು ಬೇಸರಪಟ್ಟುಕೊಳ್ಳುವ ಬದಲು, 'ಇದು ನನ್ನ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ಸಿಕ್ಕ ಅವಕಾಶವೆಂದು ಉಪಯೋಗಿಸಿಕೊಳ್ಳಬೇಕು. ನಮಗೆ ಎದುರಾಗುವ ಕಷ್ಟಗಳನ್ನು ತಡೆಯಲು ನಮ್ಮಿಂದ ಸಾಧ್ಯವಿಲ್ಲದಿರಬಹುದು ಆದರೆ ಆ ಕಷ್ಟಗಳನ್ನು ಎದು–ರಿಸುವ ನಮ್ಮ ದೃಷ್ಟಿಕೋನವೇ ನಮ್ಮ ಸೋಲು ಅಥವಾ ಗೆಲುವನ್ನು ನಿರ್ಧರಿಸುತ್ತದೆ.

### ಸಮಯ

'ಟೈಮ್ ಈಸ್ ಮನಿ.' ಅನ್ನುತ್ತಾರೆ. ಆದ–ರೆ ಸಮಯ ಹಣಕ್ಕಿಂತ ದೊಡ್ಡದು. ಏಕೆಂದರೆ ನಮ್ಮ ಬಳಿಯಿರುವ ಹಣ ಎಷ್ಟು ಅಂತ ನಮಗೆ ಗೊತ್ತು. ಅದನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ನಮ್ಮ ಬಳಿ ಇರುವ ಸಮಯ ಎಷ್ಟು ಅಂತ ಗೊತ್ತಿಲ್ಲ. ಮತ್ತು ಅದನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲ ನಾವು ಎದ್ದು ತಕ್ಷಣ ಮಾಡುವ ಕೆಲಸಗಳು ನಮ್ಮ ದಿನದ ಮೂಡ್ ಮತ್ತು ದೃಷ್ಟಿಕೋನವನ್ನು ನಿರ್ಧರಿಸುತ್ತವೆ. ಆದ್ದರಿಂದ ಬೆಳಿಗ್ಗೆದ್ದು ಮೊಬೈಲ್ ನೋಡುವುದು ನಕಾರಾತ್ಮಕ ಸುದ್ದಿ ಓದುವುದನ್ನು ಬಿಡಬೇಕು. ಅದರ ಜಾಗದಲ್ಲಿ ಮುಂಜಾನೆಯ ಮೊದಲ ಒಂದು ಗಂಟೆ ಒಳ್ಳೆಯ ಪುಸ್ತಕ ಓದಬೇಕು. ಕೈಯಲ್ಲಿರುವ ಈ ದಿನವನ್ನು ಹೇಗೆ ಸುಂದರಗೊಳಿಸಬಲ್ಲೆ ಎಂದು ಯೋಚಿಸಿ ಯೋಜನೆ ಹಾಕಿಕೊಂಡು ಆ ಪ್ರಕಾರ ಕೆಲಸ ಮಾಡಬೇಕು.

### ಹೋಲಿಕೆ

ಇತರರಜೀವನದಜೊತೆಗೆನಮ್ಮಜೀವನವನ್ನುಹೋಲಿಸಿಕೊಂಡು ಕರಬುತ್ತೇವೆ. ಬೇರೆಯವರು ಅದೃಷ್ಟವಂತರು ನಾನು ನತದೃಷ್ಟ. ಇತರರಿಗೆ ಎಲ್ಲವೂ ಸುಲಭವಾಗಿ ದೊರೆಯುತ್ತದೆ. ನನಗೆ ಎಷ್ಟೇ ಕಷ್ಟ ಪಟ್ಟರೂ ಏನೂ ದೊರೆಯುತ್ತಿಲ್ಲ ಎಂದು ಹಲಬುತ್ತೇವೆ. ಅದರಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ಬೇರೆಯವರ ಜೀವನ ನೋಡಿ ಕೀಳ–ರಿಮೆ ಅನುಭವಿಸುತ್ತೇವೆ. ಕೀಳರಿಮೆ ಒಮ್ಮೆ ಜೀವನದಲ್ಲಿ ಪ್ರವೇಶ ಪಡೆಯಿತೆಂದರೆ ಮೇಲೇಳಲು ಬಿಡುವುದಿಲ್ಲ. ಆದ್ದರಿಂದ ನನ್ನ ಜೀವನ ಕೀಳು ಎಂದುಕೊಳ್ಳುವುದು ಜೀವನವನ್ನೇ ಹಾಳು ಮಾಡುತ್ತದೆ. ಆದ–ರಿಂದ ನಿಮ್ಮನ್ನು ನೀವು ಬೇರೆಯವರಿಗೆ ಹೋಲಿಸಿಕೊಳ್ಳುವ ಬದಲು ನಿಮ್ಮ ಇಂದಿನ ಸ್ಥಿತಿಯನ್ನು ನಿಮ್ಮದೇ ನಿನ್ನೆಯ ಸ್ಥಿತಿಗೆ ಹೋಲಿಸಿಕೊಳ್ಳಿ. ಇತರರ ಏಳ್ಗೆಯನ್ನು ಕಂಡು ಅಸೂಯೆ ಪಡುವ ಬದಲು ಅವರಿಂದ ಪ್ರೇರಣೆ ಪಡೆಯುವುದು ಒಳ್ಳೆಯದು.



### ಸನ್ನಿವೇಶ

ಯಾವುದೇ ಸನ್ನಿವೇಶಗಳು ಹೇಳಿ ಕೇಳಿ ಬರುವುದಿಲ್ಲ. ಹಾಗೆಯೇ ಕಷ್ಟಗಳು ಸಹ. ಕಷ್ಟಗಳು ಎದುರಾದಾಗ ನನಗೆ ಏಕೆ ಈ ಕಷ್ಟಗಳು ಎಂದೆಲ್ಲ ಗೊಣುಗುವ ಬದಲು ಈ ಸವಾಲನ್ನು ನಾನು ಹೇಗೆ ನಿಭಾಯಿಸಬಲ್ಲೆ. ಇದರಿಂದ ನಾನು ಯಾವ ರೀತಿಯ ಹೊಸ ಪಾಠ ಕಲಿಯಬಲ್ಲೆ. ಹೇಗೆ ಮುಂದಿನ ಕಷ್ಟಗಳನ್ನು ಎದುರಿಸಲು ಗಟ್ಟಿಯಾಗಬಲ್ಲೆ ಎಂದೆಲ್ಲ ಯೋಚಿಸಬೇಕು. ಇದರರ್ಥ ಇಷ್ಟೆ, ಬದುಕಿನಲ್ಲಿ ನಡೆಯುವ ಆಕಸ್ಮಿಕ ಸನ್ನಿವೇಶಗಳನ್ನು ಹೇಗೆ ನೋಡುತ್ತೇವೆ ಎಂಬುದು ಮುಖ್ಯವಾಗುತ್ತದೆ. ಸನ್ನಿವೇಶಗಳನ್ನು ನಿಭಾಯಿಸುವಾಗ ಕೋಪದ ಬದಲು ತಾಳ್ಮೆಯ ಹೆಜ್ಜೆಗೆ ಆದ್ಯತೆ ನೀಡಿದರೆ ಜೀವನದ ಪ್ರತಿ ಪ್ರೀತಿ ಹೆಚ್ಚುತ್ತದೆ.

### ಸಂತಸ

ನನಗೆ ದೊಡ್ಡ ಗೆಲುವು ಸಿಕ್ಕಾಗ ನಾನು ಖುಷಿ ಪಡುತ್ತೇನೆಂದು ಕಾಯುತ್ತ ಕೂತರೆ ಸಣ್ಣ ಪುಟ್ಟ ಸಂತೋಷಗಳು ಕೈತಪ್ಪಿ ಹೋಗುತ್ತವೆ. ದಿನ ರಾತ್ರಿ ಮಲಗುವಾಗ ಉತ್ತಮ ಕೆಲಸಗಳನ್ನು ನೆನಪಿಸಿಕೊಳ್ಳಬೇಕು. ಅದು ಯಾವುದೇ ಇರಬಹುದು. ನೀವು ಅಂದುಕೊಂಡಂತೆ ವಾಕಿಂಗ್ ಹೋಗಿದ್ದು ಇರಬಹುದು. ಇಲ್ಲವೇ ಅಭ್ಯಾಸ ಮಾಡಿದ್ದು ಇರಬಹುದು. ಬೇರೆಯವರಿಗೆ ಮಾಡಿದ ಸಣ್ಣ ಸಹಾಯವೂ ಇರಬಹುದು. ಇಂಥ–ವುಗಳನ್ನು ನೆನೆಯುವುದರಿಂದ ನಿಮ್ಮ ಮೆದುಳಿಗೆ ಧನಾತ್ಮಕ ಸಂದೇಶ ನೀಡುತ್ತದೆ.

### ಮುಳ್ಳುಗಳಿರುವ ಗಿಡ



ಬದುಕು ಕೆಟ್ಟದಾಗಿಲ್ಲ ಅಥವಾ ಒಳ್ಳೆಯದಾಗಿಲ್ಲ. 'ನಮ್ಮ ದೃಷ್ಟಿಕೋನ ಬದಲಾದರೆ, ನಮ್ಮ ಸೃಷ್ಟಿಯೇ ಬದಲಾಗುತ್ತದೆ.' ಸಕಾರಾತ್ಮಕ ದೃಷ್ಟಿಕೋನದಿಂದ ನೋಡಿದರೆ ಬದುಕಿನಲ್ಲಿ ಒಳ್ಳೆಯದೇ ಕಾಣಿಸುತ್ತದೆ. ನಕಾರಾತ್ಮಕವಾಗಿ ನೋಡಿದರೆ ಕೇವಲ ಕೆಟ್ಟದ್ದೇ ಕಾಣಿಸುತ್ತದೆ. ಹಾಗಾಗಿ ನಾವು ಸಮಸ್ಯೆಗಳ ನಡುವೆಯೂ ಉತ್ತಮವಾದುದನ್ನು ಹೆಕ್ಕಿ ತೆಗೆಯುವ ಕೌಶಲವನ್ನು ಬೆಳೆಸಿಕೊಳ್ಳಬೇಕು. ಮುಳ್ಳುಗಳಿರುವ ಗಿಡದಲ್ಲಿ ಅರಳಿ ನಿಂತಿರುವ ಗುಲಾಬಿ ಕಡೆ ನೋಡಿದರೆ ಸಂತಸವೆನಿಸುತ್ತದೆ. ಕೇವಲ ಮುಳ್ಳುಗಳನ್ನು ನೋಡಿದರೆ ನೋವೆನಿಸುತ್ತದೆ. 'ಕಾಮಾಲೆ ಕಣ್ಣಿದ್ದವ–ರಿಗೆ ಕಂಡದ್ದೆಲ್ಲಾ ಹಳದಿ.' ಎಂಬ ಮಾತಿನಂತೆ ಮನಸ್ಸು ಒಳಗಿನಿಂದ ಹೇಗಿರುತ್ತದೆಯೋ ಹಾಗೆ ಹೊರಗಿನ ಬದುಕು ಕಾಣುತ್ತದೆ. ದೃಷ್ಟಿಕೋನ ಎಂಬುದು ಕಣ್ಣುಗಳಿಗೆ ಧರಿಸುವ ಕನ್ನಡಕದಂತೆ. ಕಪ್ಪಾಗಿದ್ದರೆ ಜಗತ್ತು ಕತ್ತಲೆಯಾಗಿ ಕಾಣುತ್ತದೆ. ಅದೇ ಬಣ್ಣದ ಕನ್ನಡಕ ಹಾಕಿದರೆ ಜಗತ್ತು ವರ್ಣರಂಜಿತವಾಗಿ ಕಾಣುತ್ತದೆ. 'ನಮ್ಮ ಬದುಕಿನ ಗುಣಮಟ್ಟವನ್ನು ನಿರ್ಧರಿಸುವುದು ನಮ್ಮ ಪರಿಸ್ಥಿತಿಯಲ್ಲ, ನಮ್ಮ ದೃಷ್ಟಿಕೋನ.' ಎಂದು ತಿಳಿದು ನಡೆದಾಗ ಬದುಕಿನಲ್ಲಿ ಕಷ್ಟಗಳೆಂಬ ಮುಳ್ಳುಗಳಿದ್ದರೂ ಜೀವನ ಗುಲಾಬಿ ತೋಟವಾಗಿ ಕಂಗೊಳಿಸುತ್ತದೆ.



ಲೇಖನ
– ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



# ಇತರರ ಸ್ಥಾನದಲ್ಲಿ ನಿಂತು ಯೋಚಿಸುವ ಗುಣವಿರಲಿ

■ ಉದಯರಶ್ಮಿ ದಿನಪತ್ರಿಕೆ



ಮನದಂಗಳ

ಧನಂಜಯನು ತನ್ನ ಮೂರು ವರ್ಷ ವಯಸ್ಸಿನ ಮಗಳು ಮಿಥಾಲಿ ಮತ್ತು ಒಂದು ವರ್ಷ ವಯಸ್ಸಿನ ಮಗ ಧನ್ಯತ್‌ರನ್ನು ಕರೆದುಕೊಂಡು ಲೋಕಲ್ ರೈಲಿನಲ್ಲಿ ಬೆಂಗಳೂ–ರಿನಿಂದ ಮಂಡ್ಯದ ಕಡೆಗೆ ಪ್ರಯಾಣಿಸುತ್ತಿದ್ದನು. ರೈಲು ಕಿಕ್ಕಿರಿದು ತುಂಬಿದ್ದು, ಒಂದಷ್ಟು ಮಂದಿ ತಮ್ಮ ಮೊಬೈಲ್‌ನಲ್ಲಿ ಹರಟುತ್ತಿದ್ದರೆ, ಇನ್ನೊಂದಷ್ಟು ಮಂದಿ ತಮ್ಮ ಸಹ ಪ್ರಯಾಣಿಕರ ಜೊತೆಗೆ ಕಷ್ಟ ಸುಖ ಮಾತನಾಡುತ್ತಿದ್ದರು. ಧನಂ–ಜಯನ ಇಬ್ಬರು ಮಕ್ಕಳಾದ ಮಿಥಾಲಿ ಮತ್ತು ಧನ್ಯತ್ ಒಂದೇ ಸಮನೆ ಜೋರಾಗಿ ಅಳುತ್ತಾ ತನ್ನ ಮಡಿಲಲ್ಲಿ ಕುಳಿತಿದ್ದರು. ಆದರೆ ಇದ್ಯಾವುದರ ಪರಿವೆಯೂ ಇಲ್ಲದೇ ಧನಂಜಯನು ಸೀಟಿನ ಪಕ್ಕದ ಕಿಟಕಿಗೆ ತನ್ನ ತಲೆಯನ್ನು ಇಟ್ಟು ಏನನ್ನೋ ಗಾಢವಾಗಿ ಚಿಂತಿಸುತ್ತಾ ಕುಳಿತಿದ್ದನು. ತನ್ನ ಮಕ್ಕಳು ತೀರಾ ದೊಡ್ಡದಾಗಿ ಅಳುತ್ತಿದ್ದರೂ ಧನಂಜಯನಿಗೆ ಇದ್ಯಾವುದರ ಪರಿವೆಯೇ ಇರಲಿಲ್ಲ.

ಮಕ್ಕಳ ಜೋರಾದ ಕಿರುಚಾಟದ ಅಳುವಿನಿಂದಾಗಿ ಕಿರಿಕಿರಿ ಆಗಲಾರಂಭಿಸಿತು. ಅಕ್ಕಪಕ್ಕದಲ್ಲಿ ಕುಳಿತಿದ್ದವರು, ಈ ಮಕ್ಕಳು ಇಷ್ಟು ಜೋರಾಗಿ ಅಳುತ್ತಿರುವುದರಿಂದ ಇತರ ಪಯಾಣಿಕರಿಗೆ ಸಮಸ್ಯೆ ಆಗುತ್ತದೆ ಎನ್ನುವ ಪರಿವೆಯೇ ಇಲ್ಲದಂತೆ ಕಿಟಕಿಗೆ ತಲೆಯಿಟ್ಟು ಆತನು ಕುಳಿತಿದ್ದಾನಲ್ಲ ಎಂದು ಪರಸ್ಪರ ಮಾತನಾಡಿಕೊಳ್ಳಲು ಪ್ರಾರಂಭಿಸಿದರು. ಆಗ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಸೂಟು ಬೂಟು ಹಾಕಿದ್ದ ಮಹಾಶಯನೊಬ್ಬ ಧನಂಜಯನನ್ನು ತಟ್ಟಿ ಎಬ್ಬಿಸಿ, ಈ ನಿನ್ನ ಮಕ್ಕಳು ಎಷ್ಟು ಜೋರಾಗಿ ಅಳುತ್ತಾ ಗದ್ದಲ ಮಾಡುತ್ತಿದ್ದಾರೆ, ಪ್ರಯಾಣಿಕರಿಗೆ ಕಿರಿಕಿರಿ ಆಗುತ್ತದೆ ಎನ್ನುವ ಪ್ರಜ್ಞೆ ನಿನಗೆ ಬೇಡವೇ ಎಂದು ಸಿಟ್ಟಿನಿಂದ ಪ್ರಶ್ನಿಸುತ್ತಾನೆ.

ಆಗ ತಕ್ಷಣ ಗಾಢ ಯೋಚನೆಯಿಂದ ಹೊರಬಂದ ಧನಂಜಯನು, ದಯವಿಟ್ಟು ಕ್ಷಮಿಸಿರಿ, ಮಕ್ಕಳ ಅಳುವು ನನ್ನ ಅರಿವಿಗೆ ಬರಲಿಲ್ಲ, ನಾನು ಮಕ್ಕಳನ್ನು ಸಮಾಧಾನ ಮಾಡುತ್ತೇನೆ. ಈ ಮಕ್ಕಳ ತಾಯಿ ಅಂದರೆ ನನ್ನ ಮಡದಿ ಈಗಷ್ಟೇ ಕ್ಯಾನ್ಸರ್ ರೋಗದಿಂದ ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ತೀರಿಕೊಂಡಳು. ಸಣ್ಣ ಮಕ್ಕಳಿಗೆ ತಮ್ಮ ತಾಯಿಯ ಅಗಲಿಕೆಯ ನೋವನ್ನು ಹೇಗೆ ವ್ಯಕ್ತಪಡಿಸಬೇಕು ಎಂದು ತಿಳಿಯುತ್ತಿಲ್ಲ, ಆದ್ದರಿಂದ ಅವರು ತೀರಾ ಗದ್ದಲ ಮಾಡುತ್ತಿದ್ದಾರೆ. ದಯವಿಟ್ಟು ಮಕ್ಕಳನ್ನು ಕ್ಷಮಿಸಿರಿ, ಮಕ್ಕಳು ಅಳದಂತೆ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದ. ಆಗ ಮಕ್ಕಳ ಅಳುವಿನಿಂದ ಕಿರಿಕಿರಿ ಎಂದು ಹೇಳುತ್ತಿದ್ದ ಪ್ರಯಾಣಿಕರ ಕಣ್ಣಂಚಲ್ಲಿ ನೀರು ತುಂಬಿತ್ತು. ಕಿರಿಕಿರಿಯ ಭಾವನೆಯು ಹೊರಟು ಹೋಗಿ ಮಕ್ಕಳ ಮತ್ತು ಧನಂಜಯನ ಮೇಲೆ ಅನುಕಂಪದ ಭಾವವು ಮೂಡಿತ್ತು.



ಪ್ರತಿಯೊಂದು ಸನ್ನಿವೇಶವೂ ನಾವು ನೋಡುವ ದೃಷ್ಟಿಕೋನವನ್ನು ಅವಲಂಬಿಸಿಕೊಂಡು ಇರುತ್ತದೆ. ಧನಂಜಯನ ಬದುಕಲ್ಲಿ ನಡೆದಿರುವ ಘಟನೆಯನ್ನು ಪ್ರಯಾಣಿಕರು ಅರಿಯದೇ ಇದ್ದಾಗ ಮಕ್ಕಳ ಅಳುವು ಅವರಿಗೆಲ್ಲಾ ಕಿರಿಕಿರಿ ಮತ್ತು ಸಮಸ್ಯೆಯಾಗಿ ಕಂಡಿತು. ಯಾವಾಗ ಮಕ್ಕಳ ತಾಯಿಯ ಸಾವಿನ ವಿಚಾರ ಅವರಿಗೆ ತಿಳಿಯಿತೋ ಆಗ ಮಕ್ಕಳ ಮೇಲೆ ಎಲ್ಲರಿಗೂ ಅನುಕಂಪ ಮೂಡಿತು. ಅದೇ ರೀತಿ ಯಾವುದೇ ಒಂದು ಸನ್ನಿವೇಶವನ್ನು ನೋಡಿದ ತಕ್ಷಣ ಅದಕ್ಕೆ ಪ್ರತಿಕ್ರಿಯಿಸುವ ಬದಲು ಸನ್ನಿವೇಶವನ್ನು ಅಥ–'ಣಟಿಜಜಜಿಟಿಜರ್ಜಸಿಕೊಳ್ಳುವುದು ಉತ್ತಮ. ನೋಡುವ ದೃಷ್ಟಿಕೋನವು ಬದಲಾದರೆ ದೃಶ್ಯವೂ ಬದಲಾಗುತ್ತದೆ ಎಂಬಂತೆ ನಮ್ಮ ಮೂಗಿನ ನೇರಕ್ಕೆ ಎಲ್ಲವನ್ನೂ ನೋಡುವ ಬದಲು ಇತರರ ಸ್ಥಾನದಲ್ಲಿ ನಿಂತು ನೋಡುವ ಗುಣ ಬೆಳೆಸಿಕೊಳ್ಳಬೇಕು.


ಲೇಖನ
– ಸಂತೋಷ್ ರಾವ್ ಪೆರ್ಮುಡ
ಪೆರ್ಮುಡ ಮನೆ
ಪಟ್ರಮೆ ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ ತಾಲೂಕು
ದ.ಕ ಜಿಲ್ಲೆ–574198
ದೂ:9742884160




# ಜೇವರಗಿ ತಾಲ್ಲೂಕಿನಲ್ಲಿ ಅದ್ದೂರಿ ಕಾರಹುಣ್ಣಿಮೆ ಆಚರಣೆ

ಜೇವರಗಿ: ಮುಂಗಾರು ಮಳೆಯ ಕಣ್ಣುಮುಚ್ಚಾಲೆ ನಡುವೆಯೂ ಈ ಬಾರಿ ತಾಲ್ಲೂಕಿನಲ್ಲಿ ಸಡಗರ ಸಂಭ್ರಮದಿಂದ ರೈತರು ತಮ್ಮ ಜಾನುವಾರುಗಳಿಗೆ ಶೃಂಗಾರ ಮಾಡಿ, ಗ್ರಾಮದ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ಮುಖಾಂತರ ಕಾರಹುಣ್ಣಿಮೆ ಹಬ್ಬವನ್ನು ಆಚರಿಸಿ ಖುಷಿಪಟ್ಟರು.

ಕಾರ ಹುಣ್ಣಿಮೆ ಮುಂಗಾರು ಹಂಗಾಮಿನ ಆರಂಭವನ್ನು ಸೂಚಿಸುತ್ತದೆ. ಈ ಹಬ್ಬದ ಬಳಿಕವೇ ಮುಂಗಾರು ಮಳೆ ಆರಂಭವಾಗುವುದು ಎಂದು ನಂಬಲಾಗಿದೆ. ಬೇಸಿಗೆಯ ತಾಪ ಕಳೆದು ಭೂಮಿ ತಂಪಾಗುವುದರಿಂದ ರೈತರು ಬಿತ್ತನೆಗೆ ಕೈಹಾಕಲು ಸಿದ್ಧರಾಗುತ್ತಾರೆ. ಈ ದಿನದಂದು ಬರುವ ಮೃಗಶಿರಾ ಮಳೆಯು ಹೊಲಗಳನ್ನು ಉತ್ತು–ಬಿತ್ತುವ ಚಟುವಟಿಕೆಗೆ ಹಸಿರು ನಿಶಾನೆ ನೀಡುತ್ತದೆ.



ರೈತರ ಬದುಕಿನ ಅವಿಭಾಜ್ಯ ಅಂಗವಾಗಿರುವ ಎತ್ತುಗಳು ವರ್ಷವಿಡೀ ಕಷ್ಟಪಟ್ಟು ದುಡಿಯುತ್ತವೆ. ಅವುಗಳಿಲ್ಲದೆ ಕೃಷಿ ಅಸಾಧ್ಯ. ಆದ್ದರಿಂದ ಈ ದಿನದಂದು ಎತ್ತುಗಳಿಗೆ ಕೆಲಸದಿಂದ ವಿರಾಮ ನೀಡಿ, ಅವುಗಳನ್ನು ಅಲಂಕರಿಸಿ ಪೂಜಿಸಿ ಕೃತಜ್ಞತೆ ಸಲ್ಲಿಸಲಾಗುತ್ತದೆ. ರೈತನ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ಎತ್ತುಗಳಿಗೆ ಕೃತಜ್ಞತೆ ಸಲ್ಲಿಸುವ ಹಬ್ಬಇದಾಗಿದೆ.ಈ ಹಬ್ಬವು ಭೂಮಿಯ ಫಲವತ್ತತೆ, ಉತ್ತಮ ಮಳೆ ಮತ್ತು ಸಮೃದ್ಧ ಬೆಳೆಗಾಗಿ ದೇವರನ್ನು ಪ್ರಾರ್ಥಿಸುವ ಸಂದರ್ಭವೂ ಆಗಿದೆ. ಮುಂಬರುವ ದಿನಗಳಲ್ಲಿ ಕೃಷಿ ಚಟುವಟಿಕೆಗಳು ಚೆನ್ನಾಗಿ ನಡೆಯಲಿ ಎಂಬುದು ರೈತರ ಸಂಕಲ್ಪ.ಈ ದಿನಜೋಳವನ್ನು ಕುಟ್ಟಿ ಮಾಡಿದ ಕಿಚಡಿಯನ್ನು ಮನೆದೇವರಿಗೆ ನೈವೇದ್ಯ ಮಾಡಲಾಗುತ್ತದೆರೈತರ ಮನೆಯಲ್ಲಿನ ಕೃಷಿ ಸಾಮಗ್ರಿಗಳನ್ನು ಸ್ವಚ್ಛಗೊಳಿಸಿ ಅಲಂಕರಿಸಿ ಪೂಜಿಸಲಾಗುತ್ತದೆ ಎತ್ತುಗಳಿಗೆ ಹೊಸ ಹಗ್ಗ, ಕೊಳಕಣ್ಣಿ (ಕೊರಳಿಗೆ ಕಟ್ಟುವ ಹಗ್ಗ), ಮೂಗುದಾಣ, ಬಾಸಿಂಗ, ಗಾಜುಮಕಡಿ (ಹಣೆಗೆ ಕಟ್ಟುವ ಮಾಲೆ) ಇತ್ಯಾದಿಗಳನ್ನು ಕಟ್ಟಲಾಗುತ್ತದೆಎತ್ತುಗಳ ಕೊಂಬುಗಳಿಗೆ ಬಣ್ಣ, ವಾರ್ನಿಸ್, ಗಾಣದೆಣ್ಣೆ, ಹುರಮಂಜು ಹಚ್ಚಲಾಗುತ್ತದೆಕೃಷಿ ಉಪಕರಣಗಳಾದ ಗೋದಲಿ, ಚಕ್ಕಡಿಗಳಿಗೆ ಎಣ್ಣೆ ಮತ್ತು ಹುರಮಂಜು ಸವರಲಾಗುತ್ತದೆ. ಎತ್ತುಗಳನ್ನು ಚೆನ್ನಾಗಿ ಸ್ನಾನ ಮಾಡಿಸಿ, ಕೊಂಬುಗಳಿಗೆ ಬಣ್ಣ ಹಚ್ಚಿ, ಮೈಮೇಲೆ ವಿವಿಧ ಬಣ್ಣಗಳ ಚಿತ್ತಾರಗಳನ್ನು ಬಿಡಿಸಲಾಗುತ್ತದೆ ಹಣೆಗೆ ಬಾಸಿಂಗ, ಹಣೆಪಟ್ಟಿ, ಕೊರಳಿಗೆ ಘಂಟೆ, ಕೊರಳಿಗೆ ಸುಂದರವಾದ ಕೊರಳಪಟ್ಟಿ (ಘರಾರಿ), ಕಾಲುಗಳಿಗೆ ನಾಲು ಕಟ್ಟಲಾಗುತ್ತದೆ ಎತ್ತುಗಳಿಗೆ ಜೋಳದ ಅಂಬಲಿ, ಗಾಣದೆಣ್ಣೆ, ಅರಿಷಿಣ ಪುಡಿ (ಕೆಲವರು ಕೋಳಿಯ ತತ್ತಿಯನ್ನು ಹಾಕುತ್ತಾರೆ) ಸೇರಿಸಿ ಗೊಟ್ಟದ ಮೂಲಕ ಕುಡಿಸಲಾಗುತ್ತದೆ ಪೂಜೆ: ಸಿಂಗರಿಸಿದ ಎತ್ತುಗಳಿಗೆ ಮನೆಯಲ್ಲಿ ಆರತಿ ಬೆಳಗಿ, ಪೂಜೆ ಸಲ್ಲಿಸಲಾಗುತ್ತದೆ. ಹೋಳಿಗೆ, ಕಡುಬು, ಪಾಯಸ ಮುಂತಾದ ಸಿಹಿ ಖಾದ್ಯಗಳನ್ನು ತಯಾರಿಸಿ ಎತ್ತುಗಳಿಗೆ ನೈವೇದ್ಯ ಮಾಡಲಾಗುತ್ತದೆಹಬ್ಬದ ಪ್ರಮುಖ ಆಕರ್ಷಣೆಯೆಂದರೆ ಸಿಂಗರಿಸಿದ ಎತ್ತುಗಳ ಮೆರವಣಿಗೆ. ಗ್ರಾಮದ ಮುಖ್ಯ ಬೀದಿಗಳಲ್ಲಿ ವಾದ್ಯಗಳೊಂದಿಗೆ ಎತ್ತುಗಳನ್ನು ಓಡಿಸಲಾಗುತ್ತದೆ. "ಕರಿ ಹರಿಯುವುದು" ಎಂಬ ವಿಶಿಷ್ಟ ಸಂಪ್ರದಾಯ ಈ ಹಬ್ಬದ

# ಭಂಕೂರ : ಬಂಡಿ ಓಡಿಸಿ ಕರಿ ಹರಿಯುವ ಕೆರಿಯಮ್ಮದೇವಿ ಜಾತ್ರೆ ಸಂಪನ್ನ

ಶಹಾಬಾದ:ತಾಲೂಕಿನ ಭಂಕೂರ ಗ್ರಾಮದ ಗ್ರಾಮ ದೇವತೆಯಾದ ಕೆರಿಯಮ್ಮ ದೇವಿಯ ಜಾತ್ರೆಯಲ್ಲಿ ಮಂದಿರದ ಪಕ್ಕದಲ್ಲಿರುವ ಗುಡ್ಡದಿಂದ ಬಂಡಿ ಓಡಿಸುವುದು ಹಾಗೂ ಕರಿ ಹರಿಯುವ ವಿಶಿಷ್ಟವಾದ ಕಾರ್ಯಕ್ರಮ ಕಾರ ಹುಣ್ಣಿಮೆ ನಿಮಿತ್ತ ಸೋಮವಾರ ಅಪಾರ ಭಕ್ತಾಧಿಗಳ ಮಧ್ಯೆ ಸಡಗರ ಸಂಭ್ರಮದಿಂದ ನಡೆಯಿತು.



ರವಿವಾರ ದೇವಿಯ ಮೂರ್ತಿಯನ್ನು ದೇವಸ್ಥಾನದಿಂದ ಮೆರವಣಿಗೆ ಮುಖಾಂತರ ಕಾಗಿಣಾ ನದಿಗೆ ಕರೆದುಹೋಗಿ ಗಂಗಾಸ್ನಾನ ಮಾಡಲಾಯಿತು. ಬೆಳಿಗ್ಗೆ ಗ್ರಾಮದ ಅಗಸಿಯ ಮುಂಭಾಗದಲ್ಲಿ ದೇವಿಯ ಮೂರ್ತಿಯನ್ನು ತಂದ ನಂತರ ಗ್ರಾಮಸ್ಥರು ಕಾಯಿ ಮತ್ತು ಕರ್ಪೂರ ಅರ್ಪಿಸಿದರು. ನಂತರ ಮೂರ್ತಿಯನ್ನು ಮಂದಿರದಕ್ಕೆ ತಂದು ಮರುಸ್ಥಾಪಿಸಲಾಯಿತು.ನಂತರ ವಿಶೇಷ ಪೂಜೆ ಸಲ್ಲಿಸಿದರು.ಸಂಜೆ ಅಂಕಲಮ್ಮ ಗುಡಿಯಿಂದ ಮೆರವಣಿಗೆ ಮುಖಾಂತರ ಬಂಡಿಯನ್ನು ದೇವಸ್ಥಾನಕ್ಕೆ ತರಲಾಯಿತು. ಕರಿಹರಿಯುವ ಬ್ರಾಹ್ಮಣ ಹಾಗೂ ಬಂಡಿ ಓಡಿಸುವ ಮಜ್ಜಿಗೆ ಮನೆತನದ ವ್ಯಕ್ತಿ ದೇವಿಯ ದರ್ಶನ ಪಡೆದರು.

ಬಂಡಿ ಓಡಿಸಿ ಕರಿ ಹರಿದರು : ಕರಿ ಹರಿಯುವುದಕ್ಕಾಗಿ ಸುಮಾರು ದಿನಗಳಿಂದ ಜೋಡೆತ್ತುಗಳನ್ನು ಮೇಯಿಸಿ ಬಂಡಿಗೆ ಕಟ್ಟುತ್ತಾರೆ. ಅದರೂಳಗೆ ಖಡ್ಗದಾರಿಯಾದ ಕುಲಕರ್ಣಿ ಹಾಗೂ ಬಾರಕೋಲು ಹಿಡಿದ ಮಜ್ಜಿಗೆ ಮನೆತನದ ವ್ಯಕ್ತಿ ವಿಶೇಷ ಪೂಜೆ ಸಲ್ಲಿಸಿ ಸಂಜೆ ಮಂದಿರದ ಗುಡ್ಡದಿಂದ ಬಂಡಿ ಓಡುವ ಮನಮೋಹಕ ದೃಶ್ಯವನ್ನು ಸಾವಿರಾರು ಜನರು ನೋಡಿ ದೇವಿಗೆ ಕೈ ಮುಗಿದು ಧನ್ಯಾರ್ಥತೆಯನ್ನು ಅನುಭವಿಸಿದರು.

ನಂತರ ಬಂಡಿಯೂ ಊರೊಳಗೆ ಪ್ರವೇಶಿಸಿ ಈಶ್ವರ ದೇವಸ್ಥಾನದ ಹತ್ತಿರ ಬಂದು ನಿಂತು ಅಗಸಿಗೆ ಕಟ್ಟಿದ ಸಿಂಗರಿಸಿದ ಹಗ್ಗವನ್ನು (ಕರಿ) ಹರಿಯುವ ರೋಮಾಂಚನ ದೃಶ್ಯವನ್ನು ನೋಡಲು ಸಾವಿರಾರು ಜನರು ಕಿಕ್ಕಿರಿದು ನಿಂತ್ತಿತ್ತು. ಖಡ್ಗದಾರಿಯಾದ ಕುಲಕರ್ಣಿ ಹಗ್ಗವನ್ನು ಕಡಿದಾಗ ಎಲ್ಲರೂ ಕರಿಹರಿಯಿತು ಎಂದು ಹರ್ಷೋದ್ಘಾರಗೈದರು.

ಈ ಒಂದು ಜಾತ್ರೆಯಲ್ಲಿ ಯಾವುದೇ ಜಾತಿ ಬೇಧವಿಲ್ಲದೇ ಎಲ್ಲಾ ಜಾತಿ ಜನಾಂಗದವರು ತಮ್ಮ ತಮ್ಮ ಚಾಜಾ ಮಾಡುವ ಸಂಪ್ರದಾಯ ಬೆಳೆಸಿಕೊಂಡು ಬಂದಿದ್ದಾರೆ. ದೂರದ ಆಂದ್ರಪ್ರದೇಶ, ಗುಜರಾತ, ಮಹಾರಾಷ್ಟ್ರ ಹಾಗೂ ಸುತ್ತಮುತ್ತಲಿನ ಶಹಾಬಾದ, ವಾಡಿ,ರಾವೂರ, ಮುತ್ತಗಿ, ಶಂಕರವಾಡಿ, ಭಂಕೂರ ವಾಡಾ, ತರಿತಾಂಡಾ, ತೆಗನೂರ ಮುಗುಳನಾಗಾಂವ, ನಂದೂರ,ಅಲ್ದಿಹಾಳ,ಪೇಠಸಿರೂರ,ಗೋಳಾ,ಮಾಲಗತ್ತಿ ಮುಂತಾದ ಗ್ರಾಮದ ಸಮಸ್ತ ಜನರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು. ಜಾತ್ರೆಯ ನಿಮಿತ್ಯ ಬಿಗಿ ಪೊಲೀಸ್ ಬಂದೋಬಸ್ತ ಮಾಡಲಾಗಿತ್ತು.

# ಬೌದ್ಧಧರ್ಮ ವೈಜ್ಞಾನಿಕವಾಗಿದೆ :ಶಾಂತಪ್ಪ ಕೂಡಲಗಿ

ಜೇವರಗಿ: ಬೌದ್ಧ ಧರ್ಮವು ವೈಜ್ಞಾನಿಕ ಧರ್ಮವಾಗಿದೆ ಎಂದು ಜಿಲ್ಲಾ ಪಂಚಾಯತ ಮಾಜಿ ಸದಸ್ಯ ಶಾಂತಪ್ಪ ಕೂಡಲಗಿ ಹೇಳಿದರು. ಪಟ್ಟಣದ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿನಡೆದ ಹುಣ್ಣಿಮೆ ಪ್ರಯುಕ್ತ ಧಮ್ಮದ ಕುರಿತು ಉಪನ್ಯಾಸ ಹಾಗೂ ಬುದ್ಧ ವಂದನೆ ಕಾರ್ಯಕ್ರಮದಲ್ಲಿ ಮಾತನಾಡಿದರು ಧಮ್ಮದ ಕುರಿತು ಕಲ್ಲೂರ (ಕೆ) ಜೆ. ಎಸ್. ಎಸ್ ಶಾಲೆ ಶಿಕ್ಷಕ ರಾಜೇಂದ್ರ ಹೊಸಮನಿ ಉಪನ್ಯಾಸ ನೀಡಿದರು ಶಾಂತಪ್ಪ ಕೂಡಲಗಿ ಹಾಗೂ ಹಿರಿಯ ದಲಿತ ಮುಖಂಡರು ಧಮ್ಮ ಸೇವೆ ಮಾಡಿದರು ಈ ಸಮಯದಲ್ಲಿ ಭೀಮರಾಯ ನಗನೂರ ತಾಲೂಕಾ ಭಾರತೀಯ ಬೌದ್ಧ ಮಹಾಸಭಾ ಅಧ್ಯಕ್ಷ ಮಲ್ಲಣ್ಣ ಕೊಡಚಿ ಉಪಾಧ್ಯಕ್ಷ ರಾಜಶೇಖರ್ ಶಿಲ್ಪಿ ಶಾಂತಪ್ಪ ಯಲಗೋಡ ಮಲ್ಲಮ್ಮ ಕೊಬ್ಬಿನ ಪ್ರಭಾಕಾರ ಸಾಗರ್ ರಾಯಪ್ಪ ಬಾರಿಗಿಡ ವಿಶ್ವರಾಧ್ಯ ಮಾಯೇರ ಶ್ರೀಮಂತ ಧನ್ನಕರ ಮರೆಪ್ಪ ಬೇಗಾರ ಗುರಣ್ಣ ಹಣಮಂತ ಟೇಲರ ಸೇರಿದಂತೆ ಅನೇಕರು ಇದ್ದರು



# ಶ್ರಮ ಸಂಸ್ಕೃತಿಯ ಪ್ರತೀಕ ಕಾರ ಹುಣ್ಣಿಮೆ

ಕಲಬುರಗಿ :ರೈತನ ಎರಡು ಕಣ್ಣುಗಳಿಂತರುವ ಎತ್ತುಗಳನ್ನು ಪೂಜಿಸಿ, ಗೌರವಿಸುವ ಶ್ರಮ ಸಂಸ್ಕೃತಿಯ ಪ್ರತೀಕ ಕಾರ ಹುಣ್ಣಿಮೆ ರೈತರ ಹಬ್ಬವಾಗಿದೆ ಎಂದು ಉಪನ್ಯಾಸಕ ಎಚ್.ಬಿ. ಪಾಟೀಲ್ ಹೇಳಿದರು. ಯಾಳವಾರನಲ್ಲಿ ಕಲಬುರಗಿಯ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಸೋಮವಾರ ಜರುಗಿದ "ಕಾರ ಹುಣ್ಣಿಮೆ ಸಂಭ್ರಮ" ಕಾರ್ಯಕ್ರದಲಿ ಅವರು ಎತ್ತು ಗಳಿಗೆ ಗೌರವ, ರೈತರಿಗೆ ಸತ್ಕರಿಸಿ, ಅವರು ಮಾತನಾಡುತ್ತಿದ್ದರು. ಪ್ರಸ್ತುತವಾಗಿ ಮಳೆಯ ಅಭಾವದಿಂದ ರೈತರು ತೊಂದರೆಯಲ್ಲಿದ್ದಾರೆ. ಆದ್ದರಿಂದ ಮಳೆ–ಬೆಳೆಯಾಗಿ ರೈತರ ಬದುಕು ಸಮೃದ್ಧವಾಗಬೇಕು. ಯಾಂತ್ರಿಕ ಕಾಲದಲ್ಲಿ ಎತ್ತುಗಳ ಶ್ರಮ ಮರೆಯಬಾರದು. ದನ–ಕರುಗಳು ದೇಶದ ಅಮೂಲ್ಯ ಸಂಪತ್ತಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರೈತರಾದ ದಸ್ತಗೀರ ಪಟೇಲ್, ಅಬ್ದುಲ್ ಪಟೇಲ್ ಅವರಿಗೆ ಸತ್ಕಾರಿಸಲಾಯಿತು. ಉಪನ್ಯಾಸಕ ದೇವೀಂದ್ರ ಬಿ. ಗುಡೂರ್, ರುಕುಮ್ ಪಟೇಲ್, ಬಹಾದ್ದೂರ್ ಪಟೇಲ್,ರಾಜ ಪಟೇಲ್, ಅಬ್ದುಲ್ ಪಟೇಲ್, ಮೆಹಬೂಬ್ ಪಟೇಲ್, ಇಮಾಮ ಪಟೇಲ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.



# ಎತ್ತುಗಳಿಗೆ ಸಿಂಗರಿಸಿ ಮೆರವಣಿಗೆ

ಕಲಬುರಗಿ:ಚಿಂಚೋಳಿ ತಾಲೂಕಿನ ಚಿಮ್ಮನಚೋಡ ಗ್ರಾಮದಲ್ಲಿ ಕಾರ ಹುಣ್ಣಿಮೆ ಹಬ್ಬದ ಅಂಗವಾಗಿ ಎತ್ತುಗಳಿಗೆ ಮೈತೊಳೆದು ಬಣ್ಣಗಳಿಂದ ಸಿಂಗಾರ ಮಾಡಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಂಭ್ರಮಿಸಲಾಯಿತು.ಮನೆಗೆ ಬಂದ ಎತ್ತುಗಳಿಗೆ ನೀರು ಹಾಕಿ ಆರತಿ ಬೆಳಗಿ ಸ್ವಾಗತಿಸಿಕೊಂಡು ಹೋಳಿಗೆ, ಕಿಚಡಿ, ಹುಳಿಬಾನ ಊಟ ಬಡಿಸಿದ ಮೇಲೆ ರೈತರು ತಮ್ಮ ಬಂಧುಗಳೊಂದಿಗೆ ಊಟ ಸವಿದರು.ಈ ಸಂದರ್ಭದಲ್ಲಿ ಚಿಮ್ಮನಚೋಡ ಗ್ರಾಮದ ರೈತ ಮುಖಂಡರಾದ ಆಕಾಶ ರೆಡ್ಡಿ ಅಡಕಿ, ಪ್ರವೀಣ ರೆಡ್ಡಿ, ಆದರ್ಶ ರೆಡ್ಡಿ,ಆನಂದ ರೆಡ್ಡಿ, ನಾಗರಡ್ಡಿ, ಅಭಿಷೇಕ ರೆಡ್ಡಿ, ಭಾಗೇಶ ನಾರಾಯಣ ರೆಡ್ಡಿ, ರಾಮಕೃಷ್ಣ ರೆಡ್ಡಿ,ದಯಾನಂದ ರೆಡ್ಡಿ ಸೇರಿದಂತೆ ಇತರರು ಇದ್ದರು.

# ರಾಮ ಮಂದಿರ ದೇಣಿಗೆ ದುರ್ಬಳಕೆ ಆರೋಪ: ಸಮಗ್ರ ತನಿಖೆಗೆ ಆಗ್ರಹ

ಕಾಳಗಿ: ಅಯೋಧ್ಯೆಯ ರಾಮ ಮಂದಿರಕ್ಕೆ ಭಕ್ತರು ನೀಡಿರುವ ದೇಣಿಗೆಯ ದುರ್ಬಳಕೆಯ ಆರೋಪಗಳು ಅತ್ಯಂತ ಆತಂಕಕಾರಿಯಾಗಿದ್ದು, ಈ ಕುರಿತು ನ್ಯಾಯಸಮ್ಮತ, ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ರಾಜೇಶ ಗುತ್ತೇದಾರ ಆಗ್ರಹಿಸಿದರು.



ಪಟ್ಟಣದ ನೀಲಕಂಠ ಕಾಳೇಶ್ವರ ಕಲ್ಯಾಣ ಮಂಟಪದಲ್ಲಿ ಸಮಾನ ಮನಸ್ಕರ ಗೆಳೆಯರ ಬಳಗದ ವತಿಯಿಂದ ಸೋಮವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಮ ಮಂದಿರ ನಿರ್ಮಾಣಕ್ಕಾಗಿ ದೇಶದ ಕೋಟ್ಯಾಂತರ ಭಕ್ತರು ತಮ್ಮ ಭಕ್ತಿ, ನಂಬಿಕೆ ಮತ್ತು ತ್ಯಾಗದ ಸಂಕೇತವಾಗಿ ದೇಣಿಗೆ ನೀಡಿದ್ದಾರೆ. ಪ್ರತಿಯೊಂದು ರೂಪಾಯಿಯೂ ಭಕ್ತರ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ. ಆ ವಿಶ್ವಾಸಕ್ಕೆ ಧಕ್ಕೆ ಉಂಟಾಗಿದ್ದರೆ ಅದು ಕೇವಲ ಭಕ್ತ–ರಿಗೆ ಮಾತ್ರವಲ್ಲ, ಧಾರ್ಮಿಕ ಸಂಸ್ಥೆಗಳು ಪಾಲಿಸಬೇಕಾದ ಮೌಲ್ಯಗಳಿಗೂ ಮಾಡಿದ ದ್ರೋಹವಾಗಿದೆ ಎಂದು ಅವರು ಹೇಳಿದರು.ದೇವಾಲಯಗಳು ಹಾಗೂ ಸಾರ್ವಜನಿಕ ದೇಣಿಗೆಗಳಿಗೆ ಸಂಬಂಧಿಸಿದ ಎಲ್ಲ ವಿಚಾರಗಳಲ್ಲಿ ಅತ್ಯುನ್ನತ ಮಟ್ಟದ ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಹೊಣೆಗಾರಿಕೆ ಇರಬೇಕು. ದೇಣಿಗೆಗಳ ಬಳಕೆ ಕುರಿತು ಯಾವುದೇ ಅನುಮಾನಗಳಿಗೆ ಅವಕಾಶವಿಲ್ಲದಂತೆ ತನಿಖೆ ನಡೆಸಿ ಸತ್ಯಾಂಶವನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಭರತನೂರಿನ ಪೂಜ್ಯ ಚಿಕ್ಕಗುರುನಂಜೇಶ್ವರ ಅಪ್ಪಾಜಿ, ಸಾಮಾಜಿಕ ಕಾರ್ಯಕರ್ತ ಹನುಮಂತಪ್ಪ ಕಾಂತಿ ಹಾಗೂ ಭಾರತೀಯ ಕಿಸಾನ್ ಸಂಘದ ಅಧ್ಯಕ್ಷ ಭೀಮರಾಯ ಮಲಘಾಣ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಪಂಚಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ರಾಘವೇಂದ್ರ ಗುತ್ತೇದಾರ, ದೇವಸ್ಥಾನ ಸಮಿತಿ ಅಧ್ಯಕ್ಷ ಶಿವಶರಣಪ್ಪ ಕಮಲಾಪೂರ, ಉದ್ಯಮಿ ವಿಶ್ವನಾಥ ವನಮಾಲಿ, ಪಪಂ ಸದಸ್ಯ ಶರಣಪ್ಪ ಬೆಲೂರ, ಗುರುರಾಜ ಮದ್ದೂರ, ಬಸವರಾಜ ಮಡಿವಾಳ, ದತ್ತು ಗುತ್ತೇದಾರ, ಯುವ ಕಾಂಗ್ರೆಸ್ ಅಧ್ಯಕ್ಷ ಪ್ರದೀಪ ಡೊಣ್ಣೂರ, ವೇದಪ್ರಕಾಶ ಮೋಟಗಿ, ಸಂತೋಷ ಕಡಬುರ, ಸಂತೋಷ ಪತಂಗೆ, ಶರಣು ಮಜ್ಜಗಿ, ಅವಿನಾಶ ಕೊಡದೂರ, ವಿಠ್ಠಲ್ ಸೇಗಾಂವಕರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಮಾಜದ ಸಮಗ್ರ ಸಹಕಾರ ಅಗತ್ಯ

ಆಳಂದ: ಬಾಲಕಾರ್ಮಿಕರ ರಕ್ಷಣೆಗೆ ಕಾನೂನು ನೆರವು ನೀಡಲಿದೆ. ಇದಕ್ಕಾಗಿ ನಾಗರಿಕ ಸಮಾಜ ಹಾಗೂ ಸಂಬಂಧಿತ ಇಲಾಖೆಯ ಅಧಿಕಾರಿಗಳು ಜವಾಬ್ದಾ–ರಿಯತ ಕಾರ್ಯ ನಿರ್ವಹಿಸುವ ಮೂಲಕ ಸಮಾಜದಲ್ಲಿ ಅನಿಷ್ಠತೆಯಿಂದ ಕೂಡಿದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಶ್ರಮಿಸಬೇಕಾಗಿದೆ ಎಂದು ಸ್ಥಳೀಯ ಪ್ರಧಾನ ಸವಿಲ್ ನ್ಯಾಯಾಲಯ ನ್ಯಾಯಾಧೀಶೆ, ಕಾನೂನು ಅರಿವು ನೆರವು ಸದಸ್ಯ ಕಾರ್ಯದರ್ಶಿ ಕುಮಾರಿ ಸುಮನ ಚಿತ್ತರಗಿ ಅವರು ಕರೆ ನೀಡಿದರು.



ಪಟ್ಟಣದ ನ್ಯಾಯಾಲಯ ಆವರಣದಲ್ಲಿ ಸೋಮವಾರ ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ, ಶಿಕ್ಷಣ ಇಲಾಖೆ ಹಾಗೂ ಕಾರ್ಯನಿರತ ಪತ್ರಕರ್ತ ಸಂಘ ಆಶ್ರಯದಲ್ಲಿ ವಿಶ್ವ ಬಾಲಕಾರ್ಮಿಕರ ವಿರೋಧಿ ದಿನಾಚರಣೆ ನಿಮಿತ್ತ ಹಮ್ಮಿಕೊಂಡ ಜಾಗೃತಿ ಜಾಥಾಕ್ಕೆ ಹಸಿರು ಧ್ವಜ ತೋರಿ ಚಾಲನೆ ನೀಡಿ ಅವರು ಮಾತನಾಡಿದರು.

ಬಡತನ, ನಿರಕ್ಷರತೆ ಹಾಗೂ ಸಾಮಾಜಿಕ ಅಸಮಾನತೆಗಳು ಬಾಲಕಾರ್ಮಿಕ ಪದ್ಧತಿಗೆ ಪ್ರಮುಖ ಕಾರಣಗಳಾಗಿವೆ. ಮಕ್ಕಳನ್ನು ದುಡಿಮೆಗೆ ತಳ್ಳುವ ಬದಲು ಶಾಲೆಗೆ ಕಳುಹಿಸಿ ಉತ್ತಮ ಶಿಕ್ಷಣ ನೀಡುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯವಾಗಿದೆ. ಮಕ್ಕಳನ್ನು ದುಡಿಮೆಗೆ ಬಳಸುವುದು ಕಾನೂನುಬಾಹಿರವಾಗಿದ್ದು, ಇಂತಹ ಪ್ರಕರಣಗಳು ಕಂಡುಬಂದರೆ ಸಾರ್ವಜನಿಕರು ಕೂಡಲೇ ಸಂಬಂಧಿತ ಇಲಾಖೆಗೆ ಮಾಹಿತಿ ನೀಡಬೇಕು. ಬಾಲಕಾರ್ಮಿಕರ ವಿರುದ್ಧದ ಹೋರಾಟವು ಕೇವಲ ಸರ್ಕಾರದ ಹೊಣೆಗಾರಿಕೆಯಾಗಿರದೆ, ಇಡೀ ಸಮಾಜದ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಇನ್ನಷ್ಟು ಅನ್ವೇಷಿಸಿ ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕ ರವೀಂದ್ರಕುಮಾರ ಬಲ್ಲೂರ ಮಾತನಾಡಿ, ಬಾಲಕಾರ್ಮಿಕ (ನಿಷೆಧ ಮತ್ತು ನಿಯಂತ್ರಣ) ಕಾಯ್ದೆಯಡಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಯಾವುದೇ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು ಕಾನೂನುಬಾಹಿರವಾಗಿದೆ. ಅಪಾಯಕಾರಿ ಕೆಲಸಗಳಲ್ಲಿ ಮಕ್ಕಳನ್ನು ಬಳಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಸಾರ್ವಜನಿಕರು ಬಾಲಕಾರ್ಮಿಕರನ್ನು ಕಂಡುಬಂದಲ್ಲಿ ಕಾರ್ಮಿಕ ಇಲಾಖೆ ಅಥವಾ ಮಕ್ಕಳ ಸಹಾಯವಾಣಿ 1098ಕ್ಕೆ ಮಾಹಿತಿ ನೀಡಿ ಮಕ್ಕಳ ರಕ್ಷಣೆಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಕಾರ್ಮಿಕ ಯೋಜನಾ ಸೋಸೈಟಿ ನಿರ್ದೇಶಕ ಸಂತೋಷ ಕುಲಕರ್ಣಿ, ನ್ಯಾಯವಾದಿ ಸಂಘದ ಅಧ್ಯಕ್ಷ ಕಮಲ ರಾಠೋಡ ಅಧ್ಯಕ್ಷತೆ ವಹಿಸಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಗದೇವಿ, ಸಮನ್ವಯಾಧಿಕಾರಿ ಅಣ್ಣಪ್ಪ ಹಾದಿಮನಿ, ಸರ್ಕಾರಿ ವಕೀಲ ಇಸ್ಮಾಯಿಲ್ ಪಟೇಲ್, ಜ್ಯೋತಿ ವಿ. ಬಂದಿ, ನ್ಯಾಯವಾದಿ ಸಂಘದ ಕಾರ್ಯದರ್ಶಿ ಬಿ.ಟಿ.ಸಿಂಧೆ, ಮಾರ್ಗದರ್ಶಿ ಸಂಸ್ಥೆಯ ಆನಂದ, ಮಕ್ಕಳ ಸಹಾಯವಾಣಿ ಸಂತೋಷ ಮತ್ತು ಸಿಯುಕೆ ವಿದ್ಯಾರ್ಥಿ ವಿಷ್ಣು ಸೇರಿದಂತೆ ಸರ್ಕಾರಿ ಕನ್ಯಾ ಪ್ರೌಢಶಾಲೆ ವಿದ್ಯಾರ್ಥಿನಿಯರು ಹಾಗೂ ಸಹ ಶಿಕ್ಷಕ, ಶಿಕ್ಷಕಿಯರು ಸಿಬ್ಬಂದಿಗಳು ಜಾಥಾದಲ್ಲಿ ಭಾಗವಹಿಸಿದ್ದರು.

**ಕರ್ನಾಟಕ ಸರ್ಕಾರ**

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ ವಿಜಯಪುರ**

**ಕಾರ್ಯಪಾಲಕ ಅಭಿಯಂತರರ ಕಛೇರಿ, ಬಡಿಕಮಾನ ರಸ್ತೆ ವಿಜಯಪುರ – 586101**

**ದೂರವಾಣಿ ಸಂ: 08352–253641, 251641, ಇ–ಮೇಲ್: kuwsdbeebjp@yahoo.com**

### ಟೆಂಡರ ಪ್ರಕಟಣೆ

ಈ ಕೆಳಗಿನ ಕಾಮಗಾರಿ ನಿರ್ವಹಿಸಲು ಆಸಕ್ತಿ ಹೊಂದಿದ ಅರ್ಹ ಪೂರೈಕೆದಾರರು/ ಸಂವೇದಕರು/ ನೊಂದಾಯಿತ ಸಂಸ್ಥೆಗಳು (ರಿಜಿಸ್ಟರ್ ಫರ್ಮ) ರವರಿಂದ ಮೊಹರಾದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ / ಪ್ರಕಟಣೆ ಹೊರಡಿಸಲಾಗಿದೆ.

**1. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5524/2026–27/ 902, ದಿನಾಂಕ :–24.06.2026**
ವಿಜಯಪುರ ಮಹಾನಗರ ಪಾಲಿಕೆಗೆ ಸನ್ 2023–24 ನೇ ಸಾಲಿನ 15ನೇ ಹಣಕಾಸು ಯೋಜನೆ (ಒಟ್ಟು 1578.00 ಲಕ್ಷ ಅನುದಾನ) ಉಳಿತಾಯ ಮೊತ್ತದಲ್ಲಿ ಅನುಮೋದಿಸಲಾದ ಪರಿಷ್ಕೃತ ಕ್ರಿಯಾಯೋಜನೆ (ಮೊತ್ತ ರೂ.318.08 ಲಕ್ಷಗಳು) ಅಡಿ ವಿಜಯಪುರ ನಗರದ ವಾರ್ಡ್ ನಂ. 34 ರ ಹಿಂದೂ ಲಿಂಗಾಯತ ಸ್ಮಶಾನದಲ್ಲಿ ಹಾಲಿ ಇರುವ ಕೊಳವೆ ಬಾವಿಗೆ 63 ಮಿ.ಮೀ ಪಿ.ವಿ.ಸಿ ಕೊಳವೆ ಮಾರ್ಗ ಅಳವಡಿಸಿ, ಸಿಸ್ಟರ್ನ್ ನಿರ್ಮಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.1,11,509/– ಇ.ಎಮ್.ಡಿ. ರೂ.2,800/– ಕೆಲಸದ ಅವಧಿ– 01 ತಿಂಗಳು**

**2. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5586/2026–27/ 903, ದಿನಾಂಕ :–24.06.2026**
– ಸದರ–– ವಿಜಯಪುರ ನಗರದ ವಾರ್ಡ್ ನಂ. 15 ರೇಷ್ಮೆ ಕಾಲನಿಯಲ್ಲಿ ಹಾಲಿ ಇರುವ ಕೊಳವೆ ಬಾವಿಗೆ ಸೂಕ್ತವಾದ ಅಶ್ವಶಕ್ತಿಯ ಸಬಮರ್ಷಿಬಲ್ ಪಂಪ್ಸೆಟ್ ಪೂರೈಸಿ, ಅಳವಡಿಸುವ ಹಾಗೂ 63 ಮಿ.ಮೀ ವ್ಯಾಸದ ಪಿ.ವಿ.ಸಿ ಕೊಳವೆ ಮಾರ್ಗ ಅಳವಡಿಸಿ, ಸಿಸ್ಟರ್ನ್ ಮತ್ತು ಕೊಳವೆ ಬಾವಿ ಕೊಠಡಿ ನಿರ್ಮಿಸಿ, ಕಿರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.4,02,342/– ಇ.ಎಮ್.ಡಿ. ರೂ.10,100/– ಕೆಲಸದ ಅವಧಿ– 01 ತಿಂಗಳು.**

**3. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5564/2026–27/ 904, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ಸಂಖ್ಯೆ 28ರ ಸಾದತ್ ಮಸೀದಿ ಹತ್ತಿರವಿರುವ ತೆರೆದ ಬಾವಿಗೆ 10 HP ಸಾಮರ್ಥ್ಯದ ಮೊನೊಬ್ಲಾಕ್ ಸಬಮರ್ಷಿಬಲ್ ಪಂಪ್ಸೆಟ್ ಪೂರೈಸಿ ಅಳವಡಿಸುವುದು, 50mm ಜಿ.ಐ. ಪೈಪ್ಲೈನ್ ಹಾಕುವುದು, ಸಾರ್ವಜನಿಕ ನಳ (ಸ್ಟ್ಯಾಂಡ್ ಪೋಸ್ಟ್) ಹಾಗೂ ಟ್ಯಾಂಕರ್ ತುಂಬಿಸುವ ವ್ಯವಸ್ಥೆ ಕಲ್ಪಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.1,92,832/– ಇ.ಎಮ್.ಡಿ. ರೂ.4,900/– ಕೆಲಸದ ಅವಧಿ– 01 ತಿಂಗಳು.**

**4. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5574/2026–27/ 905, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ನಂ.12 ಕಾರ್ಗಿಲ್ ನಗರದಲ್ಲಿ ಹಾಲಿ ಇರುವ ಕೊಳವೆ ಬಾವಿಗೆ 63ಮಿ.ಮೀ ವ್ಯಾಸದ ಕೊಳವೆ ಮಾರ್ಗ ಅಳವಡಿಸಿ, ಸಿಸ್ಟರ್ನ್ ನಿರ್ಮಿಸಿ, ಕಿರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.3,74,448/– ಇ.ಎಮ್.ಡಿ. ರೂ.9400/– ಕೆಲಸದ ಅವಧಿ– 01 ತಿಂಗಳು.**

**5. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5565/2026–27/ 906, ದಿನಾಂಕ :–24.06.2026**
––– ಸದರ–– ವಿಜಯಪುರ ನಗರದ ವಾರ್ಡ ನಂ.12 ಶಿವಯೋಗಿ ನಗರ ನಾಗಲಿಂಗೇಶ್ವರ ಗುಡಿ ಹತ್ತಿರ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗೆ 5ಹೆಚ್.ಪಿ/ ಸೂಕ್ತವಾದ ಅಶ್ವಶಕ್ತಿಯ ಸಬಮರ್ಷಿಬಲ್ ಪಂಪಸೆಟ್ ಪೂರೈಸಿ, ಒದಗಿಸಿ, ಅಳವಡಿಸುವ ಹಾಗೂ 63ಮಿ.ಮೀ ವ್ಯಾಸದ ಕೊಳವೆ ಮಾರ್ಗ ಅಳವಡಿಸಿ, ಸಿಸ್ಟರ್ನ ನಿರ್ಮಿಸಿ, ಕಿರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.3,75,,706/– ಇ.ಎಮ್.ಡಿ. ರೂ.9400/– ಕೆಲಸದ ಅವಧಿ– 01 ತಿಂಗಳು.**

**6. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5567/2026–27/ 907, ದಿನಾಂಕ :–24.06.2026**
––– ಸದರ–– ವಿಜಯಪುರ ನಗರದ ವಾರ್ಡ ನಂ.08 ಶಿರಿಯಾಳಶೆಟ್ಟಿ ಚೌಕದಲ್ಲಿ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗೆ ಸೂಕ್ತವಾದ ಅಶ್ವಶಕ್ತಿಯ ಸಬಮರ್ಷಿಬಲ್ ಪಂಪಸೆಟ್ ಪೂರೈಸಿ, ಒದಗಿಸಿ, ಅಳವಡಿಸುವ ಹಾಗೂ ಕ3ಮಿ.ಮೀ ವ್ಯಾಸದ ಕೊಳವೆ ಮಾರ್ಗ ಅಳವಡಿಸಿ, ಸಿಸ್ಟರ್ನ ನಿರ್ಮಿಸಿ, ಕಿರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.3,62,680/–ಇ.ಎಮ್.ಡಿ. ರೂ.9100/– ಕೆಲಸದ ಅವಧಿ– 01 ತಿಂಗಳು.**

**7. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5563/2026–27/ 908, ದಿನಾಂಕ :–24.06.2026**
––– ಸದರ–– ವಿಜಯಪುರ ನಗರದ ವಾರ್ಡ ನಂ.02 ಎಸ್.ಸಿ. ಕಾಲೋನಿ ಖ್ವಾಜಾ ಅಮೀನ ದರ್ಗಾ ಹತ್ತಿರ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗೆ ಸುಖ್ತ ಅಶ್ವಶಕ್ತಿಯ ಸಬ್ ಮರ್ಷಿಬಲ್ ಪಂಪಸೆಟ್ ಪೂರೈಸಿ, ಒದಗಿಸಿ ಅಳವಡಿಸುವ ಹಾಗೂ 63ಮಿ.ಮೀ ವ್ಯಾಸದ ಕೊಳವೆ ಮಾರ್ಗ ಅಳವಡಿಸಿ, ಸಿಸ್ಟರ್ನ್ ನಿರ್ಮಿಸಿ, ಕಿರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.4,43,527/– ಇ.ಎಮ್.ಡಿ. (ಡಿ.ಡಿ.) ರೂ.11,100/ –ಕೆಲಸದ ಅವಧಿ– 01 ತಿಂಗಳು.**

**8. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5566/2026–27/ 909, ದಿನಾಂಕ :–24.06.2026**
––– ಸದರ–– ವಿಜಯಪುರ ನಗರದ ವಾರ್ಡ ನಂ.03 ಹೊಸ ಕುಂಬಾರ ಓಣಿ ಎಸ್.ಪಿ ಹಿಂದೆ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗೆ ಸೂಕ್ತವಾದ ಅಶ್ವಶಕ್ತಿಯ ಸಬಮರ್ಷಿಬಲ್ ಪಂಪಸೆಟ್ ಪೂರೈಸಿ, ಒದಗಿಸಿ, ಅಳವಡಿಸುವ ಹಾಗೂ 63ಮಿ.ಮೀ ವ್ಯಾಸದ ಕೊಳವೆ ಮಾರ್ಗ ಅಳವಡಿಸಿ, ಸಿಸ್ಟರ್ನ ನಿರ್ಮಿಸಿ, ಕಿರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.4,43,369/– ಇ.ಎಮ್.ಡಿ. (ಡಿ.ಡಿ.) ರೂ.11,100/ – ಕೆಲಸದ ಅವಧಿ– 01 ತಿಂಗಳು.**

**9. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5568/2026–27/ 910, ದಿನಾಂಕ :–24.06.2026**
––– ಸದರ–– ನಗರದ ವಾರ್ಡ ನಂ.35 ಸ್ವಾತಂತ್ರ್ಯ ಯೋಧರ ಕಾಲಿನಿ ನಿಂಬರಗಿ ಬಡಾವಣೆ ವೆಂಕಟರಮಣ ಗುಡಿ ಹತ್ತಿರ ಕೊಳವೆ ಬಾವಿ ಕೊರೆದು, ಸೂಕ್ತ ಅಶ್ವ ಶಕ್ತಿಯ ಸಬಮರ್ಷಿಬಲ್ ಪಂಪ ಸೆಟ್ ಅಳವಡಿಸಿ, ಕಿರು ನೀರು ಸರಬರಾಜು ಕಲ್ಪಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.4,93,007/– ಇ.ಎಮ್.ಡಿ. (ಡಿ.ಡಿ.) ರೂ.12,400/ –ಕೆಲಸದ ಅವಧಿ– 01 ತಿಂಗಳು.**

**10. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5575/2026–27/ 911, ದಿನಾಂಕ :–24.06.2026**
––– ಸದರ––– ವಿಜಯಪುರ ನಗರದ ವಾರ್ಡ ನಂ.24 ಮನಗೂಳಿ ಅಗಸಿ ರಸ್ತೆ ಕಮಾನ ಖಾನ ಬಜಾರ ಗಣಪತಿ ಗುಡಿ ಹತ್ತಿರ ಹಾಲಿ ಇರುವ ಕೊಳವ ಬಾವಿ ಮರು ಕೊರೆಯುವುದು ಮತ್ತು ಸೂಕ್ತವಾದ ಅಶ್ವಶಕ್ತಿಯ ಸಬ್ಮರ್ಷಿಬಲ್ ಪಂಪಸೆಟ್ ಅಳವಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.2,08,629/– ಇ.ಎಮ್.ಡಿ. (ಡಿ.ಡಿ.) ರೂ.5300/––ಕೆಲಸದ ಅವಧಿ– 01 ತಿಂಗಳು.**

**11. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5520/2026–27/ 912, ದಿನಾಂಕ :–24.06.2026**
–––––– ಸದರ––––– ವಾರ್ಡ್ ನಂ. 16 ರ ಗಾಂಧಿನಗರ ರಸ್ತೆಯ ಅಕ್ಕಿ ಗೋಡಾವನ್ನಿಂದ ಕಾಯಕ ನಗರ/ಪಟೇಲ್ ನಗರ ಕ್ರಾಸ್ ಹತ್ತಿರದ ಪಾರೇಖ್ ಫ್ಯಾಕ್ಟರಿವರೆಗೆ 110 ಮಿ.ಮೀ. ವ್ಯಾಸದ ಹೆಚ್.ಡಿ.ಪಿ.ಇ ಕುಡಿಯುವ ನೀರಿನ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.2,50,231/–ಇ.ಎಮ್.ಡಿ. (ಡಿ.ಡಿ.) ರೂ.6300/––ಕೆಲಸದ ಅವಧಿ– 01 ತಿಂಗಳು.**

**12. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5521/2026–27/ 913, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ನಂ. 16 ರ ಪಾರೇಖ್ ಫ್ಯಾಕ್ಟರಿ ಹತ್ತಿರದ ಕಾಯಕ/ ಪಟೇಲ್ ನಗರದಲ್ಲಿ 75 ಮಿ.ಮೀ. ವ್ಯಾಸದ ಹೆಚ್.ಡಿ.ಪಿ.ಇ ಕುಡಿಯುವ ನೀರಿನ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.2,29,806/– ಇ.ಎಮ್.ಡಿ. (ಡಿ.ಡಿ.) ರೂ.5800/–ಕೆಲಸದ ಅವಧಿ– 01 ತಿಂಗಳು.**

**13. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5518/2026–27/ 914, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ನಂ. 04 ರ ಸೋಲಾಪುರ ರಸ್ತೆ ಪಾಟೀಲ ಗಾರ್ಡೇನಿಯಾದಿಂದ ಅಂಜನೇಯ ಗಾರ್ಡೇನಿಯಾ ದೇವಸ್ಥಾನದವರೆಗೆ (ಸುನಿಲ್ ಗೌಡ ಅವರ ಮನೆ ಹತ್ತಿರ) 75 ಮಿ.ಮೀ. ವ್ಯಾಸದ ಹೆಚ್.ಡಿ.ಪಿ.ಇ ಕುಡಿಯುವ ನೀರಿನ ಕೊಳವೆಮಾರ್ಗ ಒದಗಿಸುವ ಮತ್ತು ಜೋಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.4,25,939/– ಇ.ಎಮ್.ಡಿ. (ಡಿ.ಡಿ.) ರೂ.10,700/–ಕೆಲಸದ ಅವಧಿ– 01 ತಿಂಗಳು.**

**14. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5523/2026–27/ 915, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ನಂ. 21 ರ ರಾಷ್ಟ್ರೀಯ ಹೆದ್ದಾರಿ ಸರ್ವಿಸ್ ರಸ್ತೆಯಿಂದ ನಂದಿನಿ ಬಡಾವಣೆಯ (ಗಡಗಿ ಲೇಔಟ್) ಚಿಮ್ಮಲಗಿ ಮನೆಯ ಕ್ರಾಸ್ವರೆಗೆ 160 ಮಿ.ಮೀ. ಮತ್ತು 110 ಮಿ.ಮೀ. ವ್ಯಾಸದ ಹೆಚ್.ಡಿ.ಪಿ.ಇ ಕುಡಿಯುವ ನೀರಿನ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.2,28,583/– ಇ.ಎಮ್.ಡಿ. (ಡಿ.ಡಿ.) ರೂ.5800/– ಕೆಲಸದ ಅವಧಿ– 01 ತಿಂಗಳು.**

**15. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5524/2026–27/ 916, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ನಂ. 16 ರ ಯೋಗಾಪುರ ಕ್ರಾಸ್ನಿಂದ ಹಮಾಲ ಕಾಲೋನಿಯವರೆಗೆ 200 ಮಿ.ಮೀ. ವ್ಯಾಸದ ಹೆಚ್.ಡಿ.ಪಿ.ಇ ಕುಡಿಯುವ ನೀರಿನ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.2,55,548/– ಇ.ಎಮ್.ಡಿ. (ಡಿ.ಡಿ.) ರೂ.6400/–ಕೆಲಸದ ಅವಧಿ– 01 ತಿಂಗಳು.**

**16. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5525/2026–27/ 917, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ನಂ. 21 ರ ಗುರುದೇವ ನಗರದ ಪ್ರಾರ್ಥನಾ ಶಾಲೆ ಮತ್ತು ಸಾಯಿ ಪಾರ್ಕ್ ಹತ್ತಿರ 75 ಮಿ.ಮೀ. ವ್ಯಾಸದ ಹೆಚ್.ಡಿ.ಪಿ.ಇ ಕುಡಿಯುವ ನೀರಿನ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.4,22,965 /– ಇ.ಎಮ್.ಡಿ. (ಡಿ.ಡಿ.) ರೂ.10600/–ಕೆಲಸದ ಅವಧಿ– 01 ತಿಂಗಳು.**

**17. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5519/ 2026–27/ 918, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ನಂ.21 ವಲಯ 18 ರಲ್ಲಿ ಸ್ವಾರ ಕಾಲೋನಿ ಓ.ಹೆಚ್.ಟಿ. ಯಿಂದ ಆಜಾದ ಆಸ್ಪತ್ರೆಯವರೆಗೆ 200 ಮಿ.ಮೀ. ವ್ಯಾಸದ ಹೆಚ್.ಡಿ.ಪಿ.ಇ ಕುಡಿಯುವ ನೀರಿನ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.4,60,572/– ಇ.ಎಮ್.ಡಿ. (ಡಿ.ಡಿ.) ರೂ.11,600/– ಕೆಲಸದ ಅವಧಿ– 01 ತಿಂಗಳು.**

**18. ಸಂಖ್ಯೆ: ಕಜಮ/ಕಾ.ಪಾ.ಅ–ವಿಜೆಪಿ/ತಾಂ.ಶಾ./ಸ.ಅ./15ನೇ ಹ.ಯೋ./E–5522/ 2026–27/ 919, ದಿನಾಂಕ :–24.06.2026**
–––––– ಸದರ––––– ವಿಜಯಪುರ ನಗರದ ವಾರ್ಡ್ ನಂ. 16 ರ ಯೋಗಾಪುರ ವಲಯದ ಹಾಸ್ಪಿಟಲ್ ರಸ್ತೆಯಿಂದ ಬಸವೇಶ್ವರ ನಗರದಲ್ಲಿ 110 ಮಿ.ಮೀ. ವ್ಯಾಸದ ಹೆಚ್.ಡಿ.ಪಿ.ಇ ಕುಡಿಯುವ ನೀರಿನ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ. **ಟೆಂಡರಗಿಟ್ಟ ಮೊತ್ತ ರೂ.1,11,509/– ಇ.ಎಮ್.ಡಿ. (ಡಿ.ಡಿ.) ರೂ.2800/– ಕೆಲಸದ ಅವಧಿ– 01 ತಿಂಗಳು.**

ಸೂಚನೆಗಳು: 1) ಟೆಂಡರ್ ದಸ್ತಾವೇಜಗಾಗಿ ಅರ್ಜಿ ಸಲ್ಲಿಸುವ ಅವಧಿ– ದಿನಾಂಕ: 29.06.2026 ರಿಂದ 06.07.2026 ರಂದು ಸಾಯಂಕಾಲ 4.30 ಗಂಟೆಯ ವರೆಗೆ. 2) ಟೆಂಡರ್ ದಸ್ತಾವೇಜನ್ನು ಒದಗಿಸುವ ಅವಧಿ– ದಿನಾಂಕ: 08 .07.2026 ರಿಂದ 10.07.2026 ರಂದು ಸಾಯಂಕಾಲ 5.30 ಗಂಟೆಯ ವರೆಗೆ. 3) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 13.07.2026 ಸಾಯಂಕಾಲ 4.00 ಗಂಟೆಯ ವರೆಗೆ. 4) ಭರ್ತಿ ಮಾಡಿದ ಟೆಂಡರ್‌ನ್ನು ತೆರೆಯುವ ದಿನಾಂಕ: 13.07.2026 ಸಾಯಂಕಾಲ 4.30 ರ ನಂತರ ಅಥವಾ ಬೇರೆ ದಿನಾಂಕ ನಿಗದಿಪಡಿಸಿದಂತೆ

**ಷರತ್ತುಗಳು:** * ಟೆಂಡರನಲ್ಲಿ ಭಾಗವಹಿಸುವ ಸಂಸ್ಥೆ/ ಏಜೆನ್ಸಿ/ ಸಂವೇದಕರು / ಪೂರೈಕೆದಾರರು ಇದೇ ತರಹದ/ ಮಾನವ ಸಂಪನ್ಮೂಲ ಪೂರೈಕೆಯ ಕುರಿತು ಕಾಮಗಾರಿಗಳನ್ನು ಸರಕಾರಿ/ ಸರಕಾರಿ ಸ್ವಾಮ್ಯದ ಇಲಾಖೆಗಳಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದ ಬಗ್ಗೆ ಅನುಭವ ಪ್ರಮಾಣ ಪತ್ರ / ಮಾನ್ಯವಿರುವ ನೋಂದಣಿ ಪ್ರಮಾಣ ಪತ್ರ, ಜಿ.ಎಸ್.ಟಿ., ಪ್ಯಾನ್ ಕಾರ್ಡ ಪ್ರತಿಗಳನ್ನು ಅರ್ಜಿಯೊಂದಿಗೆ /ಟೆಂಡರ ಬುಕಲೆಟ್ನೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕು. * ಜಿ.ಎಸ್.ಟಿಯನ್ನು ಟೆಂಡರ್ ಮೊತ್ತಕ್ಕೆ ಪ್ರತ್ಯೇಕವಾಗಿ ನೀಡಲಾಗುವುದು / ಸರ್ಕಾರದ ಪ್ರಸ್ತುತ ನಿಯಮಾವಳಿಗಳ ಪ್ರಕಾರ ಕ್ರಮಕೈಗೊಳ್ಳಲಾಗುವುದು ಹಾಗೂ ಮಾನವ ಸಂಪನ್ಮೂಲ ಸೇವಾ ಪೂರೈಕೆ ಕಾಮಗಾರಿಗೆ 13% ಪಿ.ಎಫ್. & 3.25 % ಇ.ಎಸ್. ಐ. ವಂತಿಕೆಯನ್ನು ಚಾಲ್ತಿಯಲ್ಲಿರುವ ಸರ್ಕಾರಿನಿಯಮಗಳನ್ವಯ ಪಾವತಿಸಲಾಗುವುದು. * ಕಾರ್ಮಿಕ ಇಲಾಖೆಯು ನಿಗದಿಪಡಿಸುವ ವೇತನ ದರಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ಕಾಲ ಕಾಲಕ್ಕೆ ಗುತ್ತಿಗೆದಾರರಿಗೆ ನಿಮಯಾನುಸಾರ ಪಾವತಿಸಲಾಗುವುದು. * ಯಾವುದೇ ಕಾರಣ ನೀಡದೆ ಟೆಂಡರಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ/ ರದ್ದುಪಡಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ವಾಸಾಸಂಇ/ವಿಜಯಪುರ/182/ಕೆಎಸ್ಎಂಸಿಎ/2026–27 **ಸಹಿ/– ಕಾರ್ಯಪಾಲಕ ಅಭಿಯಂತರು, ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ವಿಭಾಗ, ವಿಜಯಪುರ**

# ಶಿಸ್ತು, ಭಾವೈಕ್ಯ ಮೂಡಿಸುವ ಭಾರತ ಸೇವಾದಳ :ನಡುಗಡ್ಡಿ

■ ಉದಯರಶ್ಮಿ ದಿನಪತ್ರಿಕೆ




ಇಂಡಿ: ಭಾರತ ಸೇವಾದಳವು ನಿಸ್ವಾರ್ಥ-ರ್ಥ ಸೇವೆಗೆ ಹೆಸರಾಗಿದ್ದು, ದೇಶದ ಅಭಿವದ್ಧಿ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದು, ಅದು ಶಿಸ್ತು, ಸಂಯಮ ಕಲಿಸುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್ ಆರ್ ನಡುಗಡ್ಡಿ ಹೇಳಿದರು.

ಬುಧವಾರ ಪಟ್ಟಣದ ಸರಕಾರಿ ನೌಕರರ ಸಂಘದ ಸಭಾಭವನದಲ್ಲಿ ಭಾರತ ಸೇವಾದಳ ಜಿಲ್ಲಾ ಸಮಿತಿ, ತಾಲೂಕ ಸಮಿತಿ, ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಇಂಡಿ ವತಿಯಿಂದ ಹಮ್ಮಿಕೊಂಡ 'ತಾಲೂಕ ಮಟ್ಟದ ಪುನಶ್ಚೇತನ ಶಿಬಿರ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸೇವಾದಳದ ಶಿಕ್ಷಕರು ಮಕ್ಕಳಲ್ಲಿ ರಾಷ್ಟ್ರಭಕ್ತಿ, ಶಿಸ್ತು, ದೇಶಪ್ರೇಮ, ಸೇವಾಮನೋಭಾವ ಮತ್ತು ನಾಯಕತ್ವ ಗುಣ ಬೆಳೆಸುವ ಮೂಲಕ ದೇಶವನ್ನು ಅಭಿವೃದ್ಧಿ ಪಡಿಸಬೇಕು ಎಂದು ಹೇಳಿದರು.

ಶಿಕ್ಷಕ ಸಂತೋಷ ಬಂಡೆ ಮಾತನಾಡಿ, ಭಾರತ ಸೇವಾದಳ ಸ್ವಾತಂತ್ರ್ಯ ಹೋರಾಟ ಗಾರರು,ದೇಶಭಕ್ತರನ್ನು ಹುಟ್ಟು ಹಾಕಿದ ಸಂಸ್ಥೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರಿಗೆ ಸಾತ್ ಕೊಟ್ಟ ಏಕೈಕ ಸಂಸ್ಥೆ. ಜಾತಿ, ಧರ್ಮ, ಭಾಷೆಯ ಭೇದಭಾವವಿಲ್ಲದೆ ಎಲ್ಲರನ್ನು ಒಂದಾಗಿ ಕಾಣುತ್ತಾ, ಭಾವೈಕ್ಯತೆಯನ್ನು ಪ್ರೋತ್ಸಾಹಿಸುವ ಸಂಸ್ಥೆ ಇದಾಗಿದೆ ಎಂದು ಹೇಳಿದರು.

ಜಿಲ್ಲಾ ಸಮಿತಿ ಸದಸ್ಯ ಶ್ರೀಮಂತ ಇಂಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಪೀಳಿಗೆಯಲ್ಲಿ ದೇಶದ ಬಗ್ಗೆ ಅಪಾರ ಗೌರವ, ದೇಶಭಕ್ತಿ ಮತ್ತು ಐಕ್ಯತಾ ಮನೋಭಾವವನ್ನು ಬೆಳೆಸುವುದು ಈ ಸಂಸ್ಥೆಯ ಮುಖ್ಯ ಗುರಿಯಾಗಿದೆ ಎಂದರು.

ಜಿಲ್ಲಾ ಸಂಘಟಕ ನಾಗೇಶ ಡೋಣುರ ಪ್ರಾಸ್ತಾವಿಕವಾಗಿ ಮಾತನಾಡಿ, ಭಾರತ ಸೇವಾದಳಕ್ಕೆ ಶಿಕ್ಷಕರೇ ಅಡಿಗಲ್ಲು. ಶಿಸ್ತುಬದ್ಧ ರಾಷ್ಟ್ರೀಯ ಸೇವೆಗಾಗಿ ತರಬೇತಿ ನೀಡುವುದೇ ಭಾರತ ಸೇವಾದಳದ ಮುಖ್ಯ ಉದ್ದೇಶ ಎಂದು ಹೇಳಿದರು.

ಸರಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಬಸವರಾಜ ರಾವೂರ, ತಾಲೂಕ ಪ್ರಧಾನ ಕಾರ್ಯದರ್ಶಿ ಮಹಾದೇವ ಪ್ಯಾಟಿ ಮಾತನಾಡಿದರು. ತಾಲೂಕ ದೈಹಿಕ ಶಿಕ್ಷಣಾಧಿಕಾರಿ ಎಚ್ ಕೆ ಮಾಳಗೊಂಡ, ಬಿ ಆರ್ ಪಿ ಅಧಿಕಾರಿ ಅಶೋಕ ರಾಠೋಡ, ಪ್ರಾಥಮಿಕ ಶಿಕ್ಷಕರ ಸಂಘದ ನಿರ್ದೇಶಕ ಆನಂದ ಕೆಂಭಾವಿ ವೇದಿಕೆಯಲ್ಲಿ ಇದ್ದರು.

ಇದೇ ಸಂದರ್ಭದಲ್ಲಿ ನಿವೃತ್ತರಾದ ಜಿ ಜಿ ಬರಡೋಲ ಅವರನ್ನು ತಾಲೂಕ, ಜಿಲ್ಲಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ತಾಲೂಕ ಅಧಿನಾಯಕ ಎಸ್ ಬಿ ಕಲ್ಲೋಳ್ಳಿ ನಿರೂಪಿಸಿದರು. ತಾಲೂಕಿನ ಸೇವಾದಳದ ಶಿಕ್ಷಕ, ಶಿಕ್ಷಕಿಯರು ಪಾಲ್ಗೊಂಡಿದ್ದರು.

# ಬಿಜೆಪಿ ಸಭೆಯಲ್ಲಿ ಹಿಂದುಳಿದ ವರ್ಗಗಳ ಕಾರ್ಯಕರ್ತರ ಅಸಮಾಧಾನ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಬಿಜೆಪಿ ಮಂಡಲದ ಹಿಂದುಳಿದ ವರ್ಗಗಳ ಕಾರ್ಯಕರ್ತರು ಪಕ್ಷದ ನಿಷ್ಠಾವಂತ ಸದಸ್ಯರಾಗಿದ್ದಾರೆ ಎಂದು ಹಿಂದುಳಿದ ವರ್ಗಗಳ ಮೋರ್ಚಾದ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದು ಬುಳ್ಳಾ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಜರುಗಿದ ಬಿಜೆಪಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ನಮ್ಮ ಪಕ್ಷ ಅಧಿಕಾರದಲ್ಲಿರಲಿ, ಇಲ್ಲದಿರಲಿ ಹಿಂದುಳಿದವರ್ಗಗಳಬಹುತೇಕ ಎಲ್ಲ ಕಾರ್ಯಕರ್ತರು ಮಾತ್ರ ಪಕ್ಷಕ್ಕೆ ನಿಷ್ಠರಾಗಿ ಪಕ್ಷ ವಹಿಸಿದ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಆದ-ರೆ ಇದನ್ನು ನಾಯಕರು ಅರ್ಥ ಮಾಡಿಕೊಳ್ಳಬೇಕು. ಅಧಿಕಾರವಿದ್ದಾಗ ಲಾಭ ಪಡೆಯುವವರು ಒಬ್ಬರು, ಇಲ್ಲದಿರುವಾಗ ದುಡಿಯುವವರು ಇನ್ನೊಬ್ಬರು ಎನ್ನುವಂತಾಗಬಾರದು. ಏನೇ ಆಗಲಿ ಜಿಲ್ಲೆಯ ಹಾಗೂ ಮತಕ್ಷೇತ್ರದ ನಾಯಕರ ಗಮನಕ್ಕೆ ತಂದು ಪಕ್ಷವನ್ನು ಬಲಪಡಿಸಿ ಅಧಿಕಾರಕ್ಕೆ ತರೋಣ ಎಂದರು.

ಶ್ರೀಮಂತ ತಳವಾರ, ಪ್ರಕಾಶ ದೊಡಮನಿ, ಶರಣು ದಳವಾಯಿ, ಗುರುನಾಥ ಮುರುಡಿ, ಮುತ್ತು ಹಾಲಿಹಾಳ, ಸದ್ದಾಂ ಮಕ್ಕುಬಾಯಿ, ಶಿವರಾಜ ತಳವಾರ, ಪಿಂಟೂ ಭಾಸುತ್ಕರ್, ರಮೇಶ ಈಳಗೇರ ಮಾತನಾಡಿ, ಪಕ್ಷದಲ್ಲಿ ನಾವು ಆಟಕ್ಕೂಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ. ನಾವು ಪಕ್ಷದ ಕಾರ್ಯಕರ್ತರು. ಇಂದಿನಿಂದಲೇ ಪಕ್ಷಕ್ಕೆ ಬಲ ತುಂಬುವ ಕಾರ್ಯ ಆಗಬೇಕಾಗಿದೆ ಅದಕ್ಕಾಗಿ ನಮ್ಮಂಥ ಹಿಂದುಳಿದ ವರ್ಗಗಳ ಕಾರ್ಯಕರ್ತರ ಅಗತ್ಯತೆ ಇದೆ ಅದಕ್ಕಾಗಿ ಯಾವುದೇ ಕಾರಣಕ್ಕೂ ಕಡೆಗಣನೆ ಬೇಡ ಎಂದು ತಮ್ಮ ಅಸಮಾಧಾನ ಹೊರಹಾಕಿ ಮಂಡಲದ ಅಧ್ಯಕ್ಷರ ಬದಲಾವಣೆಗೆ ಆಗ್ರಹಿಸಿದರು.

ರಾವುತ ಅಗಸರ, ದಾವುದ್ ಇನಾಮದಾರ, ರಾಜು ರಾಠೋಡ, ಜಕ್ಕು ದೊಡ್ಡಣಿ, ಶರಣು ಪೂಜಾರಿ, ಶರಣು ಬಿಜಾಪೂರ, ರಾಜು ಸೊನ್ನಳ್ಳಿ, ಜಗದೀಶ ರಾಠೋಡ, ರೇವಣಸಿದ್ಧ ಮಣ್ಣೂರ, ಬಸವರಾಜ ಕಕ್ಕಳಮೇಲಿ ಧೀರಜ್ ಮಾನೆ ಇದ್ದರು.

# ವಿಜಯಪುರದಲ್ಲಿ ಕೋಚ್ ಡಿಪೋ ಸ್ಥಾಪಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ಬೆಂಗಳೂರು: ವಿಜಯಪುರ ಜಿಲ್ಲಾ ಕೇಂದ್ರದಲ್ಲಿ ರೈಲ್ವೆ ಸಂಪರ್ಕ ಬಲವರ್ಧನೆಗಾಗಿ ಕೋಚ್ ಡಿಪೋ ಸ್ಥಾಪಿಸಬೇಕು ಮತ್ತು ರೈಲು ನಿಲ್ದಾಣದಲ್ಲಿ ಇನ್ನೊಂದು ಆಗಮನ ಮತ್ತು ನಿರ್ಗಮನ ದ್ವಾರವನ್ನು ಅಭಿವೃದ್ಧಿ ಪಡಿಸಬೇಕೆಂದು ಕೋರಿ ಕೇಂದ್ರ ರೈಲ್ವೆ ಸಹಾಯಕ ಸಚಿವ ವಿ.ಸೋಮಣ್ಣನವರ ಜತೆ ಚರ್ಚಿಸಲಾಗಿದೆ. ಈ ಸಂಬಂಧವಾಗಿ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರಿಗೂ ಪತ್ರ ಬರೆಯಲಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.ಈ ಬಗ್ಗೆ ಮಾತನಾಡಿರುವ ಅವರು, 'ಈ ವಿಚಾರ ಕುರಿತು ಸೋಮಣ್ಣನವ-ರಿಗೂ ಪತ್ರ ಬರೆಯಲಾಗಿದೆ. ಹಿಂದೆ ವಿಜಯಪುರ ರೈಲು ನಿಲ್ದಾಣದ ಆವರಣದಲ್ಲೇ ಇದ್ದ ಗೂಡ್ಸ್ ಶೆಡ್ಡನ್ನು ಈಗ ಅಲಿಯಾಬಾದಿಗೆ ಸ್ಥಳಾಂತ-ರಿಸಲಾಗಿದೆ. ಹೀಗಾಗಿ ಕೋಚ್ ಡಿಪೋ ಸ್ಥಾಪನೆಗೆ ಜಾಗದ ಕೊರತೆಯೇನೂ ಇಲ್ಲ. ಇಲ್ಲಿ ಕೋಚ್ ಡಿಪೋ ಬಂದರೆ ಇದನ್ನು ನಿರ್ವಹಣಾ ಹಬ್ ಆಗಿ ಬೆಳೆಸಬಹುದು. ಜತೆಗೆ ವಿಜಯಪುರ ಮತ್ತು ಉತ್ತರ ಕರ್ನಾಟಕದ ಪ್ರದೇಶಗಳಿಗೆ ಮತ್ತಷ್ಟು ಪರಿಣಾಮಕಾರಿಯಾಗಿ ರೈಲು ಸಂಪರ್ಕ ಒದಗಿಸಬಹುದು.' ಎಂದಿದ್ದಾರೆ.

ವಿಜಯಪುರವು ಚಾರಿತ್ರಿಕ ಸ್ಥಳವಾಗಿದ್ದು, ವರ್ಷವಿಡೀ ಲಕ್ಷಾಂತರ ಪ್ರವಾಸಿಗರನ್ನು ಸೆಳೆಯುತ್ತಿರುವ ಪ್ರವಾಸೋದ್ಯಮ ತಾಣವಾಗಿದೆ. ಅದರಲ್ಲೂ ವಾರಾಂತ್ಯ, ಹಬ್ಬ ಹರಿದಿನಗಳು ಮತ್ತು ರಜೆ ದಿನಗಳಲ್ಲಿ ಜನದಟ್ಟಣೆ ಸೃಷ್ಟಿಯಾಗುತ್ತದೆ. ಆದ್ದರಿಂದ ವಿಜಯಪುರ ರೈಲು ನಿಲ್ದಾಣದಲ್ಲಿ ಹೆಚ್ಚುವರಿಯಾಗಿ ಇನ್ನೊಂದು ಆಗಮನ-ನಿರ್ಗಮನ ದ್ವಾರವನ್ನು ಸ್ಥಾಪಿಸಬೇಕು ಎಂದು ಪಾಟೀಲ ತಮ್ಮ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಕಳೆದ ಸೋಮವಾರ ನಡೆದ ರೈಲ್ವೆ ಇಲಾಖೆಯ ಕಾರ್ಯಕ್ರಮದ ಸಂದರ್ಭದಲ್ಲಿ ಈ ವಿಚಾರಗಳನ್ನು ಸೋಮಣ್ಣ ಅವರೊಂದಿಗೆ ಚರ್ಚಿಸಲಾಗಿದೆ. ಅವರಿಂದ ಸಕಾರಾತ್ಮಕ ಸ್ಪಂದನ ಸಿಕ್ಕಿದೆ. ಈ ಬೇಡಿಕೆಗಳು ಈಡೇರಿದರೆ, ಇನ್ನು ಕೆಲವೇ ತಿಂಗಳಲ್ಲಿ ಆರಂಭವಾಗಲಿರುವ ಬೆಂಗಳೂರು-ವಿಜಯಪುರ ವಂದೇ ಭಾರತ್ ಎಕ್ಸ್‌ಪ್ರೆಸ್ ಸೇವೆಯ ನಿರ್ವಹಣೆ ಕೂಡ ಸುಲಭವಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಮತಗಟ್ಟೆ ಅಧಿಕಾರಿಗಳಿಗೆ ಮಾಹಿತಿ ನೀಡಿ ಸಹಕರಿಸಿ :ಬೋಸಗಿ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಜೂನ್ 30 ರಿಂದ ಆರಂಭವಾಗಿದ್ದು, ಜುಲೈ 29 ರವರೆಗೆ ಅಂದರೆ ಒಂದು ತಿಂಗಳ ಕಾಲ ಪ್ರಗತಿಯಲ್ಲಿರುತ್ತದೆ, ತಾಲೂಕಿನ ಮತದಾರರು ನಿಮ್ಮ ಮನೆಗೆ ಬರುವ ಮತಗಟ್ಟೆಯ ಅಧಿಕಾರಿಗಳಿಗೆ ಸೂಕ್ತ ಮಾಹಿತಿ ಮತ್ತು ಅಗತ್ಯ ದಾಖಲೆಗಳನ್ನು ಒದಗಿಸುವ ಮೂಲಕ ದೋಷರಹಿತ ಮತಪಟ್ಟಿ ಶುದ್ಧತೆಗೆ ಸಹಕ-ರಿಸಬೇಕು ಎಂದು ಅಥಣಿ ಮತಕ್ಷೇತ್ರದ ಸಹಾಯಕ ಮತದಾರರ ನೋಂದಣಿ ಅಧಿಕಾರಿ ಹಾಗೂ ತಹಸಿಲ್ದಾರ್ ಸಿದರಾಯ ಬೋಸಗಿ ಹೇಳಿದರು.

ಅವರು ಮಂಗಳವಾರ ಇಲ್ಲಿನ ಮಿನಿ ವಿಧಾನಸೌಧ, ತಹಸೀಲ್ದಾರ್ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಒಂದು ತಿಂಗಳ ಕಾಲ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಜರುಗುತ್ತಿದ್ದು, ಜೂನ್ 30 ರಿಂದ ಮತಗಟ್ಟೆ ಅಧಿಕಾರಿಗಳು ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಮತಗಟ್ಟೆ ಮಟ್ಟದ ಅಧಿಕಾ-ರಿಗಳು ಮನೆ ಮನೆಗೆ ಭೇಟಿ ನೀಡಿ, ಹೊಸ ಹೆಸರು ಸೇರ್ಪಡೆ, ಅನರ್ಹರ ಹೆಸರು ತೆಗೆದುಹಾಕುವುದು ಮತ್ತು ತಿದ್ದುಪಡಿ ಮಾಡುವ ಮೂಲಕ ಪಟ್ಟಿಯನ್ನು ನವೀಕರಿಸಲಿದ್ದಾರೆ.

ಅಥಣಿ ವಿಧಾನಸಭಾ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ 260 ಮತಗಟ್ಟೆ ಅಧಿಕಾ-ರಿಗಳನ್ನು ನೇಮಿಸಲಾಗಿದ್ದು, 2 ಲಕ್ಷ 43 ಸಾವಿರ 842 ಮತದಾರರ ಮನೆಗಳಿಗೆ ಭೇಟಿ ನೀಡಲಿದ್ದಾರೆ. ಇದಲ್ಲದೆ ತಾಲೂಕ ಸ್ವೀಪ್ ಸಮಿತಿ, ಮುತ್ತು ಗ್ರಾಮಮಟ್ಟದ ಅಧಿಕಾರಿಗಳಿಂದ ವಿಶೇಷ ಪರಿಷ್ಕರಣೆ ಕುರಿತು ಜನಜಾಗೃತಿ ಮೂಡಿಸಲಾಗುತ್ತಿದೆ. ಈಗಾಗಲೇ 2 ಲಕ್ಷ 31 ಸಾವಿರ 94 ಮತದಾರರ ಮ್ಯಾಪಿಂಗ್ ಮತ್ತು ಪ್ರೋಜಿನ್ ಮ್ಯಾಪಿಂಗ್ ಮಾಡಲಾಗಿದೆ. ಮತಗಟ್ಟೆಯ ಅಧಿಕಾರಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ನೆರವು, ಡಿಜಿಟಲ್ ಸೇವೆಗಳ ಕುರಿತು ಈಗಾಗಲೇ ಮಾರ್ಗದರ್ಶನ ನೀಡಲಾಗಿದೆ ಎಂದರು.

**ವೇಳಾಪಟ್ಟಿಯಂತೆ ಅಧಿಕಾರಿಗಳ ಭೇಟಿ :**

ಈ ಪ್ರಕ್ರಿಯೆಯು ನಿಗದಿತ ವೇಳಾಪಟ್ಟಿಯಂತೆ ನಡೆಯಲಿದೆ. ಮನೆಗೆ ಭೇಟಿ ನೀಡುವ ಅಧಿಕಾ-ರಿಗಳು ನಿಗದಿತ ನಮೂನೆಗಳನ್ನು ನೀಡಿ ಭರ್ತಿ ಮಾಡಿಸಿಕೊಂಡು ವಾಪಸ್ ಪಡೆದುಕೊಳ್ಳುತ್ತಾರೆ. ಹೊಸ ಹೆಸರುಗಳ ಸೇರ್ಪಡೆ ಮಾಡಿ, ನಿಧನರಾದವರು, ಮನೆ ಖಾಲಿ ಮಾಡಿದವರ ಹೆಸರನ್ನು ಮತಪಟ್ಟಿಯಿಂದ ಕೈಬಿಟ್ಟು ಪರಿಷ್ಕರಣೆ ಮಾಡಲಾಗುತ್ತದೆ. ಎರಡೆರಡು ಕಡೆ ಹೆಸರು ಇದ್ದಲ್ಲಿ ಒಂದು ಕಡೆ ಮಾತ್ರ ಉಳಿಸುವ ಪ್ರಕ್ರಿಯೆ ನಡೆಯುತ್ತದೆ. ಗುರುತಿನ ಚೀಟಿಯಲ್ಲಿ ಏನಾದರೂ ದೋಷಗಳು ಇದ್ದಲ್ಲಿ ತಿದ್ದುಪಡಿ ಮಾಡಿಸಿಕೊಳ್ಳಲು ಕೂಡ ಅವಕಾಶವಿದೆ.

**ಜೂ.30 ರಿಂದ ಜುಲೈ 30 ರವರೆಗೆ ಮತದಾರರ ಪಟ್ಟಿ ಪರಿಷ್ಕರಣೆ**

ನಮೂನೆಗಳಲ್ಲಿ ಮಾಹಿತಿ ಒದಗಿಸಬೇಕು:

ಮನೆಗೆ ಬರುವ ಬಿಎಲ್‌ಒಗಳು ಎರಡು ಅರ್ಜಿಗಳನ್ನು (ಎನ್ಯುಮರೇಷನ್ ಫಾರ್ಮ್) ನೀಡುತ್ತಾರೆ. ಮತದಾರರು ಎರಡನ್ನು ಭರ್ತಿ ಮಾಡಿ ಸಹಿ ಮಾಡಬೇಕು. ಬಿಎಲ್‌ಒ ಕೂಡ ಆ ಎರಡು ಫಾರ್ಮ್‌ಗಳ ಮೇಲೆ ಸಹಿ ಮಾಡುತ್ತಾರೆ. ಒಂದನ್ನು ಸ್ವೀಕೃತಿ ಪ್ರತಿಯಾಗಿ ಮತದಾರರಿಗೆ ಮರಳಿಸಿದರೆ, ಇನ್ನೊಂದು ಪ್ರತಿಯನ್ನು ಅಧಿಕಾ-ರಿಗಳು ಕೊಂಡೊಯ್ಯುತ್ತಾರೆ. ನಂತರ ಅದನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪದಲ್ಲಿ ಸಂಗ್ರಹ ಮಾಡುತ್ತಾರೆ ಎಂದರು ಪಾರದರ್ಶಕ ಮತ್ತು ದೋಷರಹಿತ ಮತದಾರರ ಪಟ್ಟಿ ಸಿದ್ಧಪಡಿಸುವ ಉದ್ದೇಶದಿಂದ ಈ ಪರಿಷ್ಕರಣೆ ಕಾರ್ಯ ಜರುಗುತ್ತಿದ್ದು, ಮತದಾನ ಹಕ್ಕು ಹೊಂದಿರುವ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿ, ತಮ್ಮ ನಿಖರವಾದ ಮಾಹಿತಿಯನ್ನು ಸರಿಯಾಗಿ ದಾಖಲಿಸಿ ಕೊಳ್ಳುವಂತೆ ಮನವಿ ಮಾಡಿದರು.

### ಯಾವುದೇ ಆತಂಕ ಬೇಡ, ಸುಳ್ಳು ಸುದ್ದಿಗೆ ಕಿವಿಗೊಡಬೇಡಿ

**ಭಾರತ ಚುನಾವಣಾ ಆಯೋಗ ನಡೆಸುತ್ತಿರುವ ಈ ಮತದಾರ ಪಟ್ಟಿ ಪರಿಷ್ಕರಣೆಯ ಬಗ್ಗೆ ಇಲ್ಲಸಲ್ಲದ ಸುಳ್ಳು ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಡಲಾಗುತ್ತಿದ್ದು, ಸಾರ್ವಜನಿಕರು ಯಾವುದೇ ಆತಂಕ ಪಡದೆ, ಇಂತಹ ಸುಳ್ಳು ಸುದ್ದಿಗಳಿಗೆ ಕಿವಿಗೊಡಗಬಾರದು. ಮತದಾರ ಪಟ್ಟಿ ಪರಿಷ್ಕರಣೆ ಮಾಡಿಕೊಳ್ಳುವುದರಿಂದ ಸರ್ಕಾರದ ಯಾವುದೇ ಸೌಲತ್ತು ಪಡೆದುಕೊಳ್ಳಲು ತೊಂದರೆ ಇಲ್ಲ. ಮತದಾರ ಪಟ್ಟಿಯಲ್ಲಿ ಹೆಸರು ಇಲ್ಲದೆ ಇರುವ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳು ದೊರಕುವುದಿಲ್ಲ, ಅದಕ್ಕಾಗಿ ಎಲ್ಲರೂ ಕಡ್ಡಾಯವಾಗಿ ಮತಗಟ್ಟೆ ಅಧಿಕಾರಿಗಳಿಗೆ ಮಾಹಿತಿ ನೀಡುವ ಮೂಲಕ ಪರಿಷ್ಕರಣೆಯ ಕಾರ್ಯಕ್ಕೆ ಸಹಕರಿಸುವಂತೆ ಮನವಿ ಮಾಡಿದರು.**

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR